ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜನವರಿ 19, 2021

ಸಂಪುಟ : 47 ಸಂಚಿಕೆ : 260 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com






ರಾಜ್ಯ ರಸ್ತೆ ಸಾರಿಗೆ ನಿಗಮದ ದಾವಣಗೆರೆಯ ಬಸ್ ನಿಲ್ದಾಣ ಪುನರ್ ನಿರ್ಮಾಣವಾಗುತ್ತಿರುವ ಹಿನ್ನೆಲೆಯಲ್ಲಿ ಹೈಸ್ಕೂಲ್ ಮೈದಾನದಲ್ಲಿ ನಿರ್ಮಿಸಿರುವ ತಾತ್ಕಾಲಿಕ ಬಸ್ ನಿಲ್ದಾಣವನ್ನು ಉಪ ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವ ಲಕ್ಷ್ಮಣ ಸವದಿ ಉದ್ಘಾಟಿಸಿದರು. ಬಸ್ ನಿಲ್ದಾಣದ ಪುನರ್ ನಿರ್ಮಾಣ ಕಾರ್ಯಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು. (ಬಲಚಿತ್ರ)

# 300 ವಿದ್ಯುತ್ ಚಾಲಿತ ಬಸ್‌ಗಳಿಗೆ ಶೀಘ್ರದಲ್ಲೇ ಚಾಲನೆ

## ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಪುನರ್ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದ ಸಾರಿಗೆ ಸಚಿವ ಲಕ್ಷ್ಮಣ ಸವದಿ

ದಾವಣಗೆರೆ, ಜ. 18 - ಈ ತಿಂಗಳಲ್ಲೇ 300 ವಿದ್ಯುತ್ ಚಾಲಿತ ಬಸ್‌ಗಳಿಗೆ ಚಾಲನೆ ನೀಡಲಾಗುವುದು ಎಂದು ಉಪ ಮುಖ್ಯ ಮಂತ್ರಿ ಹಾಗೂ ಸಾರಿಗೆ ಸಚಿವ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

120 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಸಾರಿಗೆ ನಿಗಮದ ಬಸ್ ನಿಲ್ದಾಣದ ಪುನರ್ ನಿರ್ಮಾಣ ಕಾರ್ಯಕ್ಕೆ ಶಿಲಾನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ವಿದ್ಯುತ್ ಚಾಲಿತ ಬಸ್‌ಗೆ 2 ಕೋಟಿ ರೂ. ಬೆಲೆ ಇದೆ. ಕೇಂದ್ರ ಸರ್ಕಾರ ಪ್ರತಿ ಬಸ್‌ಗೆ 55 ಲಕ್ಷ ರೂ. ಸಬ್ಸಿಡಿ ನೀಡುತ್ತಿದೆ. ಈ ಬಸ್‌ಗಳನ್ನು ಖಾಸಗಿಯವರು ಸಬ್ಸಿಡಿಯೊಂದಿಗೆ ಖರೀದಿಸಲಿದ್ದಾರೆ. ಆ ಬಸ್‌ಗಳನ್ನು ಸಾರಿಗೆ ನಿಗಮ ಕಿಲೋಮೀಟರ್ ಗುತ್ತಿಗೆ ದರದಲ್ಲಿ ಪಡೆಯಲಿದೆ ಎಂದವರು ವಿವರಿಸಿದ್ದಾರೆ.

ಬೆಂಗಳೂರಿನಲ್ಲಿ ಸಚಿವ ಸಂಪುಟ ಸಹೋದ್ಯೋಗಿಗಳ ಜೊತೆ ಪ್ರಾಯೋಗಿಕವಾಗಿ ಬಸ್‌ನಲ್ಲಿ ಪ್ರಯಾಣಿಸಲಾಗುವುದು. ಇದೇ ತಿಂಗಳು 300 ಬಸ್‌ಗಳ ಗುತ್ತಿಗೆ ಪಡೆಯಲಾಗು ವುದು ಎಂದವರು ಹೇಳಿದ್ದಾರೆ.

ಕಂಪನಿಯವರು ಸಬ್ಸಿಡಿ ಮೂಲಕ ಬಸ್ ಖರೀದಿ ಮಾಡಲಿದ್ದಾರೆ. ನಾವು ನಮ್ಮ ಚಾಲಕರನ್ನು ಬಳಸಿಕೊಂಡು ಬಸ್ ನಿರ್ವಹಿಸಲಿದ್ದೇವೆ. ಇದರಿಂದ ವಾಯುಮಾಲಿನ್ಯ ನಿಯಂತ್ರಣಕ್ಕೆ ನೆರವಾಗಲಿದೆ ಎಂದು ಸವದಿ ತಿಳಿಸಿದ್ದಾರೆ.

**5 ಕಡೆ ತರಬೇತಿ :** ಹೊಸ ವಿನ್ಯಾಸದ ಅಂತರರಾಷ್ಟ್ರೀಯ ಬಸ್‌ಗಳ ಚಾಲನೆ ತರಬೇತಿಗೆ ಹೊಳಲ್ಕೆರೆಯಲ್ಲಿ ಈಗಾಗಲೇ ಒಂದು ಸಂಸ್ಥೆ ಸ್ಥಾಪಿಸಲಾಗಿದೆ. ಇದೇ ರೀತಿಯ ಸಂಸ್ಥೆಗಳನ್ನು 4-5 ಕಡೆ ಸ್ಥಾಪಿಸಲಾಗುವುದು. ಇಲ್ಲಿ ವಿದ್ಯುತ್ ಚಾಲಿತ ಬಸ್‌ಗಳ ಚಾಲನೆಯ ತರಬೇತಿಯೂ ಸಿಗಲಿದೆ ಎಂದು ಹೇಳಿದರು.

**ಇಂಧನಕ್ಕೆ ಬಂಗಾರ :** ಅಪಘಾತ ರಹಿತವಾಗಿ ಕಾರ್ಯ ನಿರ್ವಹಿಸುವ ಚಾಲಕರಿಗೆ ಬೆಳ್ಳಿ ಪದಕ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇಂಧನ ಉಳಿಕೆ ಮಾಡುವ ಚಾಲಕರಿಗೆ 11 ಗ್ರಾಂ ತೂಕದ ಬಂಗಾರದ ಪದಕ ನೀಡಲಾಗುವುದು ಎಂದು (4ನೇ ಪುಟಕ್ಕೆ)

### ಎರಡು ವರ್ಷಗಳಲ್ಲಿ ಕೆಲಸ ಮುಗಿಸಿದರೆ ತೊಲ ಬಂಗಾರ!

**ಶಾಸಕ ಎಸ್.ಎ. ರವೀಂದ್ರನಾಥ್**

'ಬಸ್ ಸ್ಟ್ಯಾಂಡ್ ಕಾಮಗಾರಿಯನ್ನು ಎರಡು ವರ್ಷಗಳಲ್ಲಿ ಮುಗಿಸಿದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ತೊಲ ಬಂಗಾರ ಕೊಡಿಸ್ತೀನಿ' ಎಂದು ಶಾಸಕ ಎಸ್.ಎ. ರವೀಂದ್ರನಾಥ್ ಘೋಷಿಸಿದ್ದಾರೆ!

ಸಾರಿಗೆ ನಿಗಮದ ಬಸ್ ನಿಲ್ದಾಣದ ಪುನರ್ ನಿರ್ಮಾಣ ಕಾಮಗಾರಿ ಶಂಕುಸ್ಥಾಪನೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಅವರು ಈ ಘೋಷಣೆ ಮಾಡಿದ್ದಾರೆ.

'ನಂದೊಂದು ಕಳಕಳಿ ಏನೆಂದರೆ, ಈ ಇಲಾಖೆಯವರು ಕಿತ್ತು ಹಾಕಿ ಬಿಟ್ಟರೆ ಒಂಭತ್ತು ತಿಂಗಳು ಇತ್ತ ಕಡೆ ನೋಡಲ್ಲ. ಬಿನ್ನಿ ಕಂಪನಿ ರೋಡ್‌ನ ಎಂಟು ತಿಂಗಳ ಹಿಂದೆ ಕಿತ್ತು ಹಾಕಲಾಗಿದೆ. ಅಲ್ಲಿ ಓಡಾಡಕೂ ಬರದಿಲ್ಲ' ಎಂದವರು ಜವಾರಿ ಭಾಷೆಯಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿ ವೇಗಕ್ಕೆ ಕನ್ನಡಿ ಹಿಡಿದರು. 'ರಿಂಗ್ ರೋಡ್ ಕೆಲಸ ಮಾಡಕಚ್ಚೆ ಎರಡು ವರ್ಷವಾಯಿತು. ಯಾರಾದರೂ (4ನೇ ಪುಟಕ್ಕೆ)

### 27 ಚಾಲಕರಿಗೆ ಬೆಳ್ಳಿ ಪದಕ

**ಐದು ವರ್ಷಗಳಿಂದ ಅಪಘಾತ ಹಾಗೂ ಅಪರಾಧ ರಹಿತವಾಗಿ ವಾಹನ ಚಾಲನೆ ಮಾಡಿದ 27 ಚಾಲಕರು ಹಾಗೂ ಚಾಲಕ/ನಿರ್ವಾಹಕರಿಗೆ 2018 ಹಾಗೂ 2019ನೇ ಸಾಲಿಗಾಗಿ ಬೆಳ್ಳಿ ಪದಕ ಪ್ರದಾನ ಮಾಡಲಾಗಿದೆ. ದಾವಣಗೆರೆ ಘಟಕದ ಎಂ.ಎಂ. ಮಾರ್ತಾಂಡಪ್ಪ, ಡಿ. ತಿಮ್ಮೇಶಿ, ಟಿ. ವಿಜಯ, ಶಿವಾನಂದ ಹೆಚ್. ಕಾರಗಿ, ರಾಜೇಶ್ ರಾಥೋಡ್, ನಾಗರಾಜ ಮಡಿವಾಳರ, ಕೆ. ರಂಗಪ್ಪ, ಮಂಜನಾಥ ತಳವಾರ, ಬಿ.ಜಿ. ಮಹೇಶ್ವರಪ್ಪ, ಮಹದೇವಪ್ಪ ದಳವಾಯಿ, ಕೆ.ಆರ್. ರಾಜಶೇಖರ್, ಹೆಚ್. ನಾಗರಾಜ್, ಆರ್.ಸಿ. ಪ್ರಕಾಶ, ಬಳ್ಳಿ ಸುರೇಶ್, ಆರ್.ಎ. ಮಂಜಪ್ಪ, ಕೆ. ಮೈಲಾರಪ್ಪ, ಡಿ. ದೇವರಾಜ ಹಾಗೂ ಹರಿಹರ ಘಟಕದ ವಿ.ಬಿ. ಸವಣೂರು, ಹಲುವಾಗಲು ಅಶೋಕ, ಜೆ. ರಂಗಪ್ಪ, ಹುಲಗಪ್ಪ ಭಜಂತ್ರಿ, ರವಿ ಎಸ್. ನಾಯ್ಕ, ಎಸ್.ಬಿ. ಮಂಜುನಾಥ, ಗಜೇಂದ್ರ, ಎಂ.ಕೆ. ಆನಂದ ಕುಮಾರ ಹಾಗೂ ಹರಪನಹಳ್ಳಿ ಘಟಕದ ವಿಜಯಕುಮಾರ್ ವಡ್ಡಟ್ಟಿ, ಚಂದ್ರಶೇಖರ್ ಎಸ್. ಬಡಿಗೇರ್ ಅವರು ಬೆಳ್ಳಿ ಪದಕ ಪಡೆದವರಾಗಿದ್ದಾರೆ.**

# ಪಡಿತರಕ್ಕಾಗಿ ರಾಜ್ಯದ ಭತ್ತ

## ಅನುಮತಿಗೆ ಕೇಂದ್ರಕ್ಕೆ ಪ್ರಸ್ತಾವನೆ

ಬೆಂಗಳೂರು, ಜ.18 - ರಾಜ್ಯದಲ್ಲಿ 45 ಲಕ್ಷ ಟನ್‌ಗಳಷ್ಟು ಭತ್ತ ಖರೀದಿಗೆ ಅನುಮತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಗೋಪಾಲಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ರೈತರಿಂದ ಪ್ರಸ್ತುತ ಹನ್ನೆರಡು ಲಕ್ಷ ಟನ್ ಭತ್ತ ಖರೀದಿಗೆ ಅವಕಾಶವಿದೆ, ಕೊರೋನೋತ್ತರ ಕಾಲಘಟ್ಟದಲ್ಲಿ ರೈತರಿಗೆ, ಸಾಗಣೆದಾರರಿಗೆ ಮತ್ತು ಯುವಜನರಿಗೆ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸುವ ದೃಷ್ಟಿಯಿಂದ 'ನಮ್ಮ ಭತ್ತ ನಮಗೇ ಇರಲಿ' ಎಂದು ಕೇಂದ್ರಕ್ಕೆ ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದರು.



ರಾಜ್ಯದಲ್ಲಿ ಪ್ರತಿ ವರ್ಷ 50 ಲಕ್ಷ ಟನ್ ಅಕ್ಕಿಯನ್ನು ಜನ ಬಳಕೆ ಮಾಡುತ್ತಾರೆ, ಈ ಪೈಕಿ ದೊಡ್ಡ ಪ್ರಮಾಣದಲ್ಲಿ ಭತ್ತವನ್ನು ಹೊರ ರಾಜ್ಯಗಳಿಂದ ಪಡೆಯಲಾಗುತ್ತಿದೆ. ಗುಜರಾತ್, ಉತ್ತರ ಪ್ರದೇಶ ಸೇರಿದಂತೆ ದೇಶದ ವಿವಿಧ ರಾಜ್ಯಗಳಿಂದ ಭತ್ತ ಸರಬರಾಜಾಗುತ್ತಿದೆ, ಈ ಭತ್ತ ಖರೀದಿ ಹಾಗೂ ಸಾಗಣೆಗೆ ನೂರಾರು ಕೋಟಿ ರೂ. ವೆಚ್ಚ ತಗಲುತ್ತಿದೆ.

ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ರೈತರು ಬೆಳೆಯುವ ಭತ್ತವನ್ನು ಬೆಂಬಲ ಬೆಲೆ ನೀಡಿ ಖರೀದಿಸಲು ಅವಕಾಶ ನೀಡಿದರೆ (2ನೇ ಪುಟಕ್ಕೆ)

# ಬಡ್ತಿ ಮೀಸಲಿನಲ್ಲಿ ಅಡ್ಡಿ : ಕ್ರಮಗಳ ವರದಿ ನೀಡಲು ಸುಪ್ರೀಂ ಸೂಚನೆ

ನವದೆಹಲಿ, ಜ. 18 – ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ಪದೋನ್ನತಿಯಲ್ಲಿ ಬಡ್ತಿ ನೀಡಲು ಹಲವು ರಾಜ್ಯಗಳಲ್ಲಿ ಅಡ್ಡಿ ಗಳಿವೆ ಎಂಬ ಅರ್ಜಿಗಳನ್ನು ಪರಿಗಣಿ ಸಿರುವ ಸುಪ್ರೀಂ ಕೋರ್ಟ್, ಅಗತ್ಯ ಕ್ರಮಗಳ ಕುರಿತು ತಿಳಿಸುವಂತೆ ಅಟಾರ್ನಿ ಜನರಲ್‌ಗೆ ಸೂಚನೆ ನೀಡಿದೆ.

ಸುಪ್ರೀಂ ಕೋರ್ಟ್ ಈ ಹಿಂದೆ ಯಥಾಸ್ಥಿತಿಗಾಗಿ ಹೊರಡಿಸಿದ ಆದೇಶದಿಂದಾಗಿ ಪದೋನ್ನತಿಯಲ್ಲಿ ಬಡ್ತಿ ನೀಡುವುದಕ್ಕೆ ಹಿನ್ನಡೆಯಾಗು ತ್ತಿದೆ ಎಂದು ಬಿಹಾರ, ಮಹಾರಾಷ್ಟ್ರ ಹಾಗೂ ತ್ರಿಪುರ ಸೇರಿದಂತೆ ಹಲವು ರಾಜ್ಯಗಳು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿವೆ.

ಈ ಬಗ್ಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ಪ್ರತಿಯೊಂದು ರಾಜ್ಯವೂ ತನಗೆ ಸಂಬಂಧಿಸಿದ ವಿಷಯಗಳನ್ನು ಎರಡು ವಾರಗಳಲ್ಲಿ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರಿಗೆ ಸಲ್ಲಿಸಬೇಕು ಎಂದು ತಿಳಿಸಿದೆ. ಆನಂತರ ಅಟಾರ್ನಿ ಜನರಲ್ ರಾಜ್ಯಗಳ ವಕೀಲರ ಜೊತೆ ವಿಡಿಯೋ ಕಾನ್ಫರೆನ್ಸ್ ನಡೆಸಬೇಕು. ನಂತರ ವಿಷಯಗಳನ್ನು ಅಂತಿಮಗೊಳಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

# ದೀಕ್ಷೆ ಪಡೆದ ಪಾಯಲ್



ಹರಪನಹಳ್ಳಿ, ಜ.18- ಬಿಜಾಪುರದ ಯುವತಿ ಪಾಯಲ್ ಕುಮಾರಿ ಪಾರಿಕ್ ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜೈನ ಸನ್ಯಾಸಿನಿ ದೀಕ್ಷೆ ಸ್ವೀಕಾರವನ್ನು ಗುರುಗಳಿಂದ ಪಡೆದುಕೊಂಡರು.

ನರೇಂದ್ರಕುಮಾರಜೀ, ವೈಜಯಂತಿ ಪಾರಿಕ್ ದಂಪತಿಗಳ 19 ವರ್ಷದ ಪುತ್ರಿ ಪಾಯಲ್ ಕುಮಾರಿ ಪಾರಿಕ್ ಅವರು ಭವ್ಯ ಮೆರವಣಿಗೆ ಮೂಲಕ ಆಗಮಿಸಿ ದಾರಿ ಯುದ್ದಕ್ಕೂ ವಿವಿಧ ವಸ್ತುಗಳನ್ನು ಸಾರ್ವಜನಿಕರಿಗೆ ದಾನ ಮಾಡಿದರು. ರಾಷ್ಟ್ರ ಸಂತ ಗುರುಗಳಾದ ನರೇಶ ಮುನೀಜಿ ಮಹಾರಾಜ, (4ನೇ ಪುಟಕ್ಕೆ)

# ಮಹಾಜನ್ ವರದಿಯೇ ಅಂತಿಮ

## ಉದ್ಧವ್ ಉದ್ಧಟ ಹೇಳಿಕೆಗೆ ಪಕ್ಷಭೇದ ಮರೆತು ತರಾಟೆ

ಬೆಂಗಳೂರು, ಜ.18 - ಮರಾಠಿ ಭಾಷೆ ಮತ್ತು ಸಂಸ್ಕೃತಿ ಪ್ರಧಾನ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳುವುದಾಗಿ ಆ ರಾಜ್ಯದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿಕೆ ಉದ್ಧಟತನದ ಪ್ರದರ್ಶನ ಎಂದು ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಕಿಡಿಕಾರಿದ್ದಾರೆ.

ಠಾಕ್ರೆ ಹೇಳಿಕೆ ಬೆನ್ನಲ್ಲೇ ಸರಣಿ ಟ್ವೀಟ್ ಮಾಡಿ ಮಹಾರಾಷ್ಟ್ರ ಮುಖ್ಯಮಂತ್ರಿ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಅವರು, ಇದು ಭಾರತೀಯ ಒಕ್ಕೂಟ ತತ್ವದ ವಿರುದ್ಧದ ನಿಲುವಾಗಿದೆ, ಗಡಿ ವಿಚಾರದಲ್ಲಿ ಮಹಾಜನ್ ವರದಿಯೇ ಅಂತಿಮ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಭಾಷಾಂಧತೆಯ ಮಾತುಗಳು ದೇಶದ ಏಕತೆಗೆ ಮಾರಕ, ಇದನ್ನು ನಾನು ಖಂಡಿಸುವೆ, ಕರ್ನಾಟಕದಲ್ಲಿ ಮರಾಠಿಗರು ಕನ್ನಡಿಗರೊಂದಿಗೆ ಬೆರೆತಿದ್ದಾರೆ ಎಂದು ಹೇಳಿದ್ದಾರೆ.

ಅದೇ ರೀತಿ ಮಹಾರಾಷ್ಟ್ರದ ಗಡಿ ಜಿಲ್ಲೆಗಳಲ್ಲಿರುವ ಕನ್ನಡಿಗರು ಮರಾಠಿಗರೊಂದಿಗೆ ಬೆರೆತಿದ್ದಾರೆ, ಇಂತಹ ಸೌಹಾರ್ದ ವಾತಾವರಣ ಕೆಡಿಸುವ ಯತ್ನ ನಿಮ್ಮಿಂದ ಆಗಿರುವುದು ನೋವಿನ ಸಂಗತಿ ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಯಡಿಯೂರಪ್ಪ ಅವರ ನಿಲುವಿಗೆ ಬೆಂಬಲವಾಗಿ ನಿಂತಿರುವ ಮಾಜಿ ಮುಖ್ಯಮಂತಿಗಳಾದ ಎಚ್.ಡಿ.ಕುಮಾರಸ್ವಾಮಿ ಮತ್ತು ಸಿದ್ದರಾಮಯ್ಯ, ಮಹಾರಾಷ್ಟ್ರ ಮುಖ್ಯ ಮಂತ್ರಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಕುಮಾರಸ್ವಾಮಿ, ಸರಣಿ ಟ್ವೀಟ್ ಮಾಡಿ, ಠಾಕ್ರೆ ಹೇಳಿಕೆ ಚೀನಾದ ವಿಸ್ತರಣವಾದವನ್ನು ಪ್ರತಿಧ್ವನಿಸುವುದಾಗಿದೆ, ಬಹುತೇಕ ಕನ್ನಡಿಗ ರಾಜರು, ಮಹಾರಾಷ್ಟ್ರದ ಬಹುಪಾಲನ್ನು ಆಳಿದ್ದಾರೆ ಎಂದು ಹೇಳಿದ್ದಾರೆ.

ಕನ್ನಡಿಗರ ಸಾಹಸ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿದೆ, ಠಾಕ್ರೆ ಈ ಇತಿಹಾಸವನ್ನು ಅವಲೋಕಿಸಿದರೆ, ಈಗ ಯಾರು, ಯಾರ (4ನೇ ಪುಟಕ್ಕೆ)

# ಲಸಿಕೆ ಪಡೆದಿದ್ದ ಬಳ್ಳಾರಿಯ ಓರ್ವ ಸೇರಿ ಇಬ್ಬರ ಸಾವು

### ಲಸಿಕೆಯಿಂದ ಸಾವು ಸಂಭವಿಸಿಲ್ಲ ಎಂದು ಕೇಂದ್ರದ ಸ್ಪಷ್ಟನೆ

ನವದೆಹಲಿ, ಜ. 18 - ಕೊರೊನಾ ಲಸಿಕೆ ಅಭಿಯಾನ ಆರಂಭಿಸಿದ ನಂತರ ಇದುವರೆಗೂ ಯಾವುದೇ ಗಂಭೀರ ಇಲ್ಲವೇ ತೀವ್ರ ಸ್ವರೂಪದ ಅಡ್ಡ ಪರಿಣಾಮವಾದ ಘಟನೆಗಳು ನಡೆದಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಶನಿವಾರದಿಂದ ದೇಶಾದ್ಯಂತ ಕೊರೊನಾ ಲಸಿಕೆ ಅಭಿಯಾನ ಆರಂಭಿಸಲಾಗಿದೆ. ಆನಂತರದಲ್ಲಿ ಲಸಿಕೆ ಪಡೆದ ಉತ್ತರ ಪ್ರದೇಶ ಹಾಗೂ ಕರ್ನಾಟಕದ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮನೋಹರ್ ಅಗ್ನಾನಿ, ಉತ್ತರ ಪ್ರದೇಶದ ಮೊರಾದಾಬಾದ್‌ನ ವ್ಯಕ್ತಿ ಹೃದಯ ಶ್ವಾಸಕೋಶ ಸಂಬಂಧಿ ರೋಗದಿಂದ ಮೃತಪಟ್ಟಿದ್ದಾರೆ. ಈ ಸಾವಿಗೂ ಲಸಿಕೆಗೂ ಸಂಬಂಧವಿಲ್ಲ ಎಂಬುದು ಮರಣೋತ್ತರ ಪರೀಕ್ಷೆಯಿಂದ ತಿಳಿದು ಬಂದಿದೆ ಎಂದಿದ್ದಾರೆ.

ಜನವರಿ 16ರ ಸಂಜೆ ಮೊರಾದಾಬಾದ್‌ನ ದೀನ್ ದಯಾಳ್ ಉಪಾಧ್ಯಾಯ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ 46 ವರ್ಷದ ಮಹಿಪಾಲ್ ಎಂಬುವವರಿಗೆ (3ನೇ ಪುಟಕ್ಕೆ)

# ಜನಜಾಗೃತಿಗಾಗಿ ವಾಲ್ಮೀಕಿ ಜಾತ್ರೆ



## ಜಗಳೂರು ಪೂರ್ವಭಾವಿ ಜನಜಾಗೃತಿ ಸಭೆಯಲ್ಲಿ ಪ್ರಸನ್ನಾನಂದಪುರಿ ಶ್ರೀ ಕರೆ

ಜಗಳೂರು, ಜ.18- ವಾಲ್ಮೀಕಿ ಸಮುದಾಯದ ಸಂಘಟನೆ ಮತ್ತು ಜನಜಾಗೃತಿಗಾಗಿ ಫೆ.8 ಮತ್ತು 9 ರಂದು ರಾಜನಹಳ್ಳಿಯಲ್ಲಿ 3ನೇ ವರ್ಷದ ವೈಚಾರಿಕ ವಾಲ್ಮೀಕಿ ಜಾತ್ರೆ ನಡೆಯಲಿದ್ದು, ಎಲ್ಲರೂ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ರಾಜನಹಳ್ಳಿ ಶ್ರೀ ವಾಲ್ಮೀಕಿ ಪೀಠದ ಪ್ರಸನ್ನಾನಂದ ಮಹಾಸ್ವಾಮೀಜಿ ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಜನಜಾಗೃತಿ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

ಸಹೋದರ ಸಮಾಜದ ಮಠಮಾನ್ಯಗಳಂತೆ ವಾಲ್ಮೀಕಿ ಪೀಠದಿಂದ ವಾಲ್ಮೀಕಿ ಜಾತ್ರೆ ಹೆಸರಿನಡಿ ಸಮುದಾಯವನ್ನು ಜಾಗೃತಗೊಳಿಸಿ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ, ಆರ್ಥಿಕವಾಗಿ ಅಭಿವೃದ್ಧಿಪಡಿಸಿ ಸಮಾಜವನ್ನು ಮುಖ್ಯ ವಾಹಿನಿಗೆ ತರಬೇಕಿದೆ ಎಂದು ಹೇಳಿದರು.

ದಕ್ಷಿಣ ಕನ್ನಡ ಹೊರತುಪಡಿಸಿ 28 ಜಿಲ್ಲೆಗಳನ್ನೊಳಗೊಂಡಂತೆ ರಾಜ್ಯದಲ್ಲಿ 4ನೇ ದೊಡ್ಡ ಮತ್ತು ಐತಿಹಾಸಿಕ ಪರಂಪರೆ ಹೊಂದಿದ ನಾಯಕ ಸಮುದಾಯಕ್ಕೆ ಎಲ್ಲಾ ಪಕ್ಷದವರು ಚುನಾವಣೆ ವೇಳೆ ಭರವಸೆ, ಆಮಿಷವೊಡ್ಡಿ ಮತ ಪಡೆಯುತ್ತಾರೆ. ಅಧಿಕಾರಕ್ಕೆ ಬಂದ ನಂತರ ತಾತ್ಸಾರ ಧೋರಣೆ ಅನುಸರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಆಡಳಿತ ಸರ್ಕಾರಗಳ ವಿರುದ್ದ ಸ್ವಾಭಿಮಾನಿಗಳಾಗಿ ಸಂಘಟಿ ತರಾಗುವುದು ಅನಿವಾರ್ಯವಾಗಿದೆ ಎಂದರು.

ಶೇ. 7.5ರಷ್ಟು ಮೀಸಲಾತಿ ನಮ್ಮ ಆಗ್ರಹವಾಗಿದೆ. ಸರಕಾರ ಶೀಘ್ರದಲ್ಲಿಯೇ ತೀರ್ಮಾನ ಕೈಗೂಳ್ಳುವ ವಿಶ್ವಾಸವಿದೆ ಎಂದು (4ನೇ ಪುಟಕ್ಕೆ)

# ಜಿಲ್ಲೆಯಲ್ಲಿ 752 ಜನರಿಗೆ ಕೋವಿಡ್ ಲಸಿಕೆ

ದಾವಣಗೆರೆ, ಜ.18- ಜಿಲ್ಲೆಯಲ್ಲಿ ಸೋಮವಾರ 13 ಆರೋಗ್ಯ ಕೇಂದ್ರಗಳಲ್ಲಿ 752 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲಾಗಿದೆ. 1258 ಜನರಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿತ್ತು.




ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ 84, ಕೆರೆಬಿಳಚಿಯಲ್ಲಿ 74, ನ್ಯಾಮತಿಯಲ್ಲಿ 33, ಹರಿಹರ ತಾ.ಮಲೇಬೆನ್ನೂರಿನಲ್ಲಿ 70 ಜನರಿಗೆ ಲಸಿಕೆ ನೀಡಲಾಗಿದೆ.

ದಾವಣಗೆರೆ ಭಾಷಾನಗರದ ನಗರ ಆರೋಗ್ಯ ಕೇಂದ್ರದಲ್ಲಿ 42, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ 54, ಬಾಪೂಜಿಯ ಆಸ್ಪತ್ರೆ ಹಾಗೂ ಎಸ್.ಎಸ್.ಐ.ಎಂ.ಎಸ್. ಕೇಂದ್ರಗಳಲ್ಲಿ 281 ಹಾಗೂ ಚಿಗಟೇರಿ ಜಿಲ್ಲಾಸ್ಪತ್ರೆಯ 2 ಕೇಂದ್ರಗಳಲ್ಲಿ 114 ಜನರು ಲಸಿಕೆ ಪಡೆದಿದ್ದಾರೆ.

**8 ಜನರಿಗೆ ಕೊರೊನಾ ಪಾಸಿಟಿವ್ :** ಜಿಲ್ಲೆಯ 8 ಜನರಲ್ಲಿ ಸೋಮವಾರ ಕೊರೊನಾ (3ನೇ ಪುಟಕ್ಕೆ)

# ಮೂಲೆ ಸೇರಿದ ಸ್ಮಾರ್ಟ್ ಆಟೋ

## ಇ-ಆಟೋ ಕೊಟ್ಟ ಕಂಪನಿ ವಿರುದ್ಧ ಪ್ರಕರಣ ದಾಖಲಿಸಲು ಸಿದ್ಧತೆ

ದಾವಣಗೆರೆ, ಜ. 18 - ಪರಿಸರ ಮಾಲಿನ್ಯ ಕಡಿಮೆ ಮಾಡಲು ಹಾಗೂ ಉದ್ಯೋಗ ನೀಡಲು ಸ್ಮಾರ್ಟ್ ಸಿಟಿ ಯೋಜನೆ ಮೂಲಕ ಒದಗಿಸಲಾಗಿದ್ದ ಇ-ಆಟೋಗಳು ಕೆಲಸ ಮಾಡದೇ ಮೂಲೆ ಗುಂಪಾಗಿವೆ. ಆಟೋ ಒದಗಿಸಿದ ಕಂಪನಿ ವಿರುದ್ಧ ಈಗ ಮೊಕದ್ದಮೆ ದಾಖಲಿಸಲಾಗುತ್ತಿದೆ.

**ಪರಿಸರ ಸ್ನೇಹಿ ಎಂದುಕೊಂಡು ಆಟೋ ಪಡೆದ ಫಲಾನುಭವಿಗಳು ಸಾಲದ ಸುಳಿಯಲ್ಲಿ**

ಒಂದೂವರೆ ವರ್ಷಗಳ ಹಿಂದೆ ಸ್ಮಾರ್ಟ್ ಸಿಟಿ ಯೋಜನೆಯ ಮೂಲಕ ಬ್ಯಾಟರಿ ಚಾಲಿತ ಇ - ಆಟೋಗಳನ್ನು ವಿತರಿಸಲಾಗಿತ್ತು. ಆದರೆ, ಈ ಆಟೋಗಳು ಆರಂಭದಲ್ಲೇ ಕೈ ಕೊಟ್ಟಿವೆ. ಆಟೋ ಪಡೆದ ದಿನದಿಂದಲೇ ಆರಂಭವಾದ ಸಮಸ್ಯೆಗಳು ನಂತರ ಉಲ್ಬಣಿಸಿದ್ದು, ಆಟೋಗಳು ತಳ್ಳು ಗಾಡಿ ಐಸ್ಸಾ ಎನ್ನುತ್ತಿವೆ ಎಂದು ಆಟೋ ಪಡೆದವರು ದೂರಿದ್ದಾರೆ.

ದೂರಿನಲ್ಲಿ ಹುರುಳಿದೆ ಎಂದಿರುವ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಆಟೋ ಪೂರೈಸಿದ ಪೂನಾ ಕಂಪನಿ ವಿರುದ್ಧ ಪ್ರಕರಣ ದಾಖಲಿಸಲು ನಿರ್ಧರಿಸಿರುವುದಾಗಿ ಹೇಳಿದ್ದಾರೆ.



ಸಾಂದರ್ಭಿಕ ಚಿತ್ರ

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಇ-ಆಟೋಗಳಲ್ಲಿ ಸಮಸ್ಯೆಗಳಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಪೂನಾ ಕಂಪನಿಗೆ ಐದಾರು ಬಾರಿ ಪತ್ರಗಳನ್ನು ಬರೆಯಲಾಗಿತ್ತು. ಸಮಸ್ಯೆ ಬಗೆಹರಿಸಿಕೊಳ್ಳಲು ತಿಳಿಸಲಾಗಿತ್ತು ಎಂದು ಹೇಳಿದ್ದಾರೆ.

ಇದುವರೆಗೂ ಉತ್ತರ ನೀಡದ ಕಂಪನಿ, ಕಳೆದ ವಾರದಲ್ಲಿ ಪತ್ರ ಬರೆದು, ತಾವು (2ನೇ ಪುಟಕ್ಕೆ)

# ಅನ್ಯ ಸಮಾಜದ ಹಕ್ಕು ಪಡೆಯಲು ನಮ್ಮ ಹೋರಾಟವಲ್ಲ

## ಕುರುಬ ಸಮಾಜಕ್ಕೆ ಮೀಸಲಾತಿಗೆ ಒತ್ತಾಯಿಸಿ ಪಾದಯಾತ್ರೆ ಕೈಗೊಂಡಿರುವ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಸ್ಪಷ್ಟನೆ




ಹರಿಹರ, ಜ.18- ನಗರಕ್ಕೆ ಎಸ್.ಟಿ. ಮೀಸಲಾತಿ ಹೋರಾಟದ ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮೀಜಿ ಪಾದಯಾತ್ರೆ ಮೂಲಕ ರಾಣೇಬೆನ್ನೂರಿನಿಂದ ನಗರಕ್ಕೆ ಆಗಮಿಸಿದಾಗ ಕುರುಬ ಸಮಾಜದವರು ಅದ್ದೂರಿಯಾಗಿ ಬರಮಾಡಿಕೊಂಡರು.

ತುಂಗಭದ್ರಾ ನದಿಯ ಸೇತುವೆಯ ಮೇಲೆ ಶ್ರೀಗಳಿಗೆ ಬೃಹತ್ ಹೂವಿನ ಹಾರ ಹಾಕುವ ಮೂಲಕ ಸ್ವಾಗತಿಸಲಾಯಿತು.

ಮಹಿಳೆಯರು ಕುಂಭಮೇಳಗಳೊಂದಿಗೆ ಇಪ್ಪತ್ತಕ್ಕೂ ಹೆಚ್ಚು ಡೊಳ್ಳಿನ ತಂಡಗಳು, ನಂದಿಕೋಲು, ಸಮಾಳ ಸ್ತಬ್ದ ಚಿತ್ರಗಳು ಭಜನೆ ಮತ್ತಿತರೆ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ಮೆರಗನ್ನು ತಂದವು.

ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ಮಾತನಾಡಿ, ಸಮಾಜದ ಜನತೆಯ ಒಳಿತಿಗಾಗಿ ಎಸ್.ಟಿ. ಮೀಸಲಾತಿ ಹೋರಾಟದ ಪಾದಯಾತ್ರೆ ಹಮ್ಮಿಕೊಂಡಿದ್ದರಿಂದ ಸಮಾಜದ ಸಂತಾನದ ಒಳಿತಿಗಾಗಿ ಮತ್ತು ಏಳಿಗೆಗಾಗಿ ಹೋರಾಟ ಹಮ್ಮಿಕೊಂಡಿದ್ದು, ನಾನು ನಿರೀಕ್ಷಣೆ ಮಾಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಭೂತಪೂರ್ವ ಬೆಂಬಲವನ್ನು ಸಮಾಜದವರು ನೀಡುತ್ತಿರುವುದರಿಂದ ಈ ಹೋರಾಟದಲ್ಲಿ ನಾವು ಜಯ ಗಳಿಸುವಲ್ಲಿ ಯಶಸ್ವಿಯಾಗುವುದಾಗಿ ಹೇಳಲು ಸಂತೋಷವಾಗುತ್ತದೆ. ಇದೇ ರೀತಿಯ ಫೆಬ್ರವರಿ 7 ರಂದು ಬೆಂಗಳೂರಿನ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು.

ನಾವು ಎಸ್.ಟಿ. ಮೀಸಲಾತಿಗಾಗಿ ಪಾದಯಾತ್ರೆ ನಡೆಸುತ್ತಿರುವುದು ಯಾವುದೇ ಅನ್ಯ ಸಮಾಜದ ಹಕ್ಕುಗಳನ್ನು ಪಡೆಯಲು ಅಲ್ಲ. ನಮ್ಮ ಸಮಾಜದ ಹಿರಿಯ ಮುಖಂಡರು ಕಳೆದ ಹಲವಾರು ವರ್ಷಗಳಿಂದ ಸತತವಾಗಿ ಹೋರಾಟ ಮಾಡುತ್ತಾ ಬಂದಿದ್ದಾರೆ. ಆದರೆ, ಅವರಿಗೆ ಸರಿಯಾದ ಒಗ್ಗಟ್ಟಿನ ಶಕ್ತಿ ಸಿಗದೆ ಇದ್ದ ಪರಿಣಾಮವಾಗಿ ನಮ್ಮ ಸಮಾಜಕ್ಕೆ ಹಿನ್ನಡೆಯಾಗಿದ್ದು, ಈಗ ಸಮಾಜದ ಶಕ್ತಿಯನ್ನು ತೋರಿಸುವ ಮೂಲಕ ನಮ್ಮ ಹಕ್ಕನ್ನು ಪಡೆಯಲು ಈ ಪಾದಯಾತ್ರೆ ಹಮ್ಮಿಕೊಂಡಿದ್ದು, ಇದಕ್ಕೆ ಇತರೆ ಸಮಾಜದವರೂ ಸಹ ಬೆಂಬಲ ನೀಡುತ್ತಿರುವುದರ ಪರಿಣಾಮವಾಗಿ ಈ ಹೋರಾಟದಲ್ಲಿ ಜಯ ಗಳಿಸುವ ವಿಶ್ವಾಸ ಹೊಂದಿರುವುದಾಗಿ ಹೇಳಿದರು.

ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ ಮಾತನಾಡಿದರು. ಶಾಸಕ ಎಸ್. ರಾಮಪ್ಪ ಮಾತನಾಡಿ, ಸಮಾಜದ ಜನರ ಒಳಿತಿಗಾಗಿ ಪ್ರಾರಂಭವಾದ ಪಾದಯಾತ್ರೆಯಲ್ಲಿ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಯಶಸ್ವಿಯಾಗುತ್ತಾರೆ. ಶ್ರೀಗಳು ಅದನ್ನು ಪಡೆದು ಸಮಾಜದ ಜನರಿಗೆ ಒಳಿತು ಮಾಡಿ ಯಶಸ್ವಿಯಾಗುತ್ತಾರೆ ಎಂಬ ವಿಶ್ವಾಸ ನಮಗೆ ಇದೆ ಎಂದು ಹೇಳಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಕುರುಬ ಸಮಾಜ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಪ್ರಗತಿ ಹೊಂದಲು ಎಸ್.ಟಿ. ಸೌಲಭ್ಯದ ಅವಶ್ಯಕತೆ ಇರುವುದರಿಂದ ನಾವು ಕೂಡ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಮೇಲೆ ಒತ್ತಡ ಹಾಕುವ ಮೂಲಕ ಶ್ರೀಗಳ ಹೋರಾಟಕ್ಕೆ ಬೆಂಬಲ ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ರೇವಣಸಿದ್ದೇಶ್ವರ ಮಹಾಸ್ವಾಮೀಜಿ, ಶ್ರೀ ಸೋಮಲಿಂಗೇಶ್ವರ ಮಹಾಸ್ವಾಮೀಜಿ, ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮೀಜಿ, ಮುದ್ದೇನ ಶ್ರೀಗಳು, ಮೈಲಾರ ರಾಮಪ್ಪ ಗೊರಪ್ಪ, ಕುರುಬ ಸಮಾಜದ ಅಧ್ಯಕ್ಷ ಕೆ.ಜಡಿಯಪ್ಪ, ಪ್ರಧಾನ ಕಾರ್ಯದರ್ಶಿ ಕೆ.ಪಿ. ಗಂಗಾಧರ್, ಮಲೇಬೆನ್ನೂರು, ಬಿ. ರೇವಣಸಿದ್ದಪ್ಪ, ಕುಣೆಬೆಳಕೇರಿ ದೇವೇಂದ್ರಪ್ಪ, ದೂಡ ಅಧ್ಯಕ್ಷ ಶಿವಕುಮಾರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಕುಂಬಳೂರು ವಿರೂಪಾಕ್ಷಪ್ಪ, ನಂದಿಗಾವಿ ಶ್ರೀನಿವಾಸ್, ಸಿ.ಎನ್. ಹುಲಗೇಶ್, ಚೂರಿ ಜಗದೀಶ್, ಬೀರಪ್ಪ ಪ್ರಾಂಶುಪಾಲ, ನಾಗೇಂದ್ರಪ್ಪ, ವಿರುಪಾಕ್ಷಪ್ಪ, ಸುರೇಶ್ ಚಂದಪೂರ್, ನಿಂಬಕ್ಕ ಚಂದಪೂರ್, ಡಿ.ವೈ. ಇಂದಿರಾ, ಪರಮೇಶ್ವರಪ್ಪ, ಐರಣಿ ಅಣ್ಣಪ್ಪ, ಕನ್ನಪ್ಪ ಭಾನುವಳ್ಳಿ, ಎಸ್.ಎಂ. ವಸಂತ್, ಡಾ. ಹನುಮಂತಪ್ಪ ಹಳ್ಳಳ್ಳಿ, ಹದಡಿ ನಿಂಗಪ್ಪ, ನಿಂಗಮ್ಮನವರ್, ರಾಜೇಂದ್ರ, ಕೊಕ್ಕನೂರು ದ್ಯಾಮಪ್ಪ, ಚಂದ್ರಪ್ಪ, ಡಾ. ಜಯಪ್ರಕಾಶ್, ಬಸವರಾಜಪ್ಪ, ಮಹದೇಶ್ವರ ಮಹಾಸ್ವಾಮಿಗಳು, ಶರವಣ ಶ್ರೀಗಳು, ಮಹಾದೇವಯ್ಯ ಶ್ರೀಗಳು, ಸರಸ್ವತಿ, ಚೆನ್ನಮ್ಮ, ಪ್ರೇಮಲತಾ, ಸುವರ್ಣ ನಾಗರಾಜ್, ಶಶಿಕಲಾ ಮತ್ತು ಇತರರು ಹಾಜರಿದ್ದರು.

ಪೊಲೀಸ್ ಇಲಾಖೆಯ ಆಡಿಷನಲ್ ಎಸ್ಪಿ ರಾಜೀವ್, ಸಿಪಿಐಗಳಾದ ಸತೀಶ್, ದೇವರಾಜ್, ಪಿಎಸ್ಐಗಳಾದ ಸುನಿಲ್, ಬಸವರಾಜ್, ಡಿ. ರವಿಕುಮಾರ್, ಶೈಲಾಶ್ರೀ ಸೇರಿದಂತೆ ಮತ್ತಿತರೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಂಡಿದ್ದರು.

ಷಣ್ಮುಖ ಮತ್ತು ತಂಡದವರಿಂದ ಕನಕದಾಸರ ಹಾಡುಗಳ ಮೂಲಕ ಪ್ರಾರ್ಥನೆ ಮಾಡಲಾಯಿತು.

## ಮೂಲೆ ಸೇರಿದ ಸ್ಮಾರ್ಟ್ ಆಟೋ

**(1ನೇ ಪುಟದಿಂದ)** ಪೂರೈಸಿದ ಇ-ಆಟೋ ಸರಿಯಾಗಿದೆ ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಕಂಪನಿಯ ವಿರುದ್ಧ ಸದ್ಯದಲ್ಲೇ ಪ್ರಕರಣ ದಾಖಲಿಸಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ಈ ಹಿಂದೆ ಅಶಾದ್ ಷರೀಫ್ ಅವರು ಸ್ಮಾರ್ಟ್ ಸಿಟಿ ವ್ಯವಸ್ಥಾಪಕರಾಗಿದ್ದ ಸಂದರ್ಭದಲ್ಲಿ ಸಾಕಷ್ಟು ಪ್ರಚಾರದೊಂದಿಗೆ ಇ-ಆಟೋಗಳನ್ನು ಫಲಾನುಭವಿಗಳಿಗೆ ನೀಡಲಾಗಿತ್ತು.

ಇದರ ಬೆಲೆ 1.80 ಲಕ್ಷ ರೂ. ಆಗಿತ್ತು. ಈ ಪೈಕಿ 1.02 ಲಕ್ಷ ರೂ.ಗಳನ್ನು ಸ್ಮಾರ್ಟ್ ಸಿಟಿ ಸಬ್ಸಿಡಿ ರೂಪದಲ್ಲಿ ನೀಡಿದ್ದರೆ, ಉಳಿದ ಹಣವನ್ನು ಫಲಾನುಭವಿಗಳು ಭರಿಸಬೇಕಿತ್ತು.

ಮೊದಲ ಹಂತದಲ್ಲಿ 20 ಇ-ಆಟೋಗಳನ್ನು ಸ್ಮಾರ್ಟ್ ಸಿಟಿ ವತಿಯಿಂದ ವಿತರಿಸಲು ನಿರ್ಧರಿಸಲಾಗಿತ್ತು. ಇವುಗಳ ಪೈಕಿ 9 ಆಟೋಗಳನ್ನು ಈಗಾಗಲೇ ವಿತರಿಸಲಾಗಿದೆ.

ಸ್ಮಾರ್ಟ್ ಸಿಟಿ ಸೂಚನೆಯಂತೆ 72 ಸಾವಿರ ರೂ.ಗಳನ್ನು ಬ್ಯಾಂಕುಗಳಿಂದ ಸಾಲವಾಗಿ ಪಡೆದು ಕಟ್ಟಿದ್ದೆವು. ಆದರೆ, ಮೊದಲ ದಿನದಿಂದಲೇ ಆರಂಭವಾದ ಸಮಸ್ಯೆ ಇದುವರೆಗೂ ಬಗೆಹರಿದಿಲ್ಲ ಎಂದು ಆಟೋ ಪಡೆದ ಫಲಾನುಭವಿ ಕೊಟ್ರೇಶ್ ದೂರಿದ್ದಾರೆ.

ಮೂರು ಗಂಟೆ ಚಾರ್ಜ್ ಮಾಡಿದರೆ ಆಟೋ 70 ಕಿ.ಮೀ. ಓಡುತ್ತದೆ ಎಂದು ತಿಳಿಸಲಾಗಿತ್ತು. ಆದರೆ, ಆಟೋ 30 ಕಿ.ಮೀ. ಸಹ ಓಡುತ್ತಿಲ್ಲ. ಅಲ್ಲದೇ ಆಟೋ ಎಷ್ಟು ಕುಲುಕಾಡುತ್ತದೆ ಎಂದರೆ ಒಂದು ಬಾರಿ ಕೂತವರು ಇನ್ನೊಮ್ಮೆ ಎಂದಿಗೂ ಹತ್ತುವುದಿಲ್ಲ ಎಂದವರು ಹೇಳಿದ್ದಾರೆ.

ಈ ಬಗ್ಗೆ ಕಳೆದ ಒಂದು ವರ್ಷದಿಂದ ಆಟೋ ಪೂರೈಸಿದ ಕಂಪನಿ, ಶೋ ರೂಂ ಹಾಗೂ ಸ್ಮಾರ್ಟ್ ಸಿಟಿ ಕಚೇರಿಗಳಿಗೆ ದೂರು ನೀಡುತ್ತಲೇ ಬಂದಿದ್ದೇವೆ. ಆಟೋಗಳು ಈಗ ಮನೆ ಮುಂದೆ ಕೆಲಸ ಮಾಡದೇ ನಿಂತಿವೆ. ನಮಗೆ ನಿಂತ ಆಟೋ ಕಾಯುವುದೇ ಸಮಸ್ಯೆಯಾಗಿದೆ ಎಂದು ಕೊಟ್ರೇಶ್ ತಿಳಿಸಿದ್ದಾರೆ.

ಪರಿಸರ ಮಾಲಿನ್ಯ ನೀಗುತ್ತದೆ, ನಮ್ಮ ಜೀವನಕ್ಕೂ ಆಧಾರವಾಗುತ್ತದೆ ಎಂದು ಆಟೋ ಖರೀದಿಸಿದ್ದೆವು. ಆದರೆ, ಈಗ ನೋಡಿದರೆ ನಮ್ಮ ಬದುಕೇ ಸಂಕಷ್ಟಕ್ಕೆ ಸಿಲುಕಿದೆ. ಕಂಪನಿ ವಿರುದ್ಧ ಪ್ರಕರಣ ದಾಖಲಿಸಿದರೂ ಅದು ಬಗೆಹರಿಯುವುದಕ್ಕೆ ಎಷ್ಟು ದಿನ ಬೇಕೋ ಗೊತ್ತಿಲ್ಲ. ಬ್ಯಾಂಕ್ ಸಾಲದ ಸಮಸ್ಯೆ ಬಗೆಹರಿಸಿ ಆಟೋ ಕಂಟಕದಿಂದ ನಮ್ಮನ್ನು ಮುಕ್ತಿಗೊಳಿಸಿ ಎಂದವರು ಮೊರೆ ಇಟ್ಟಿದ್ದಾರೆ.

## 33ನೇ ವಾರ್ಡಿನಲ್ಲಿ ಶ್ರೀರಾಮ ಮಂದಿರ ನಿಧಿ ಸಂಗ್ರಹ ಸಮರ್ಪಣಾ ಅಭಿಯಾನ



ದಾವಣಗೆರೆ,ಜ.18- ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರ ನಿರ್ಮಾಣದ ನಿಧಿ ಸಂಗ್ರಹ ಸಮರ್ಪಣಾ ಅಭಿಯಾನವು ನಗರ ಪಾಲಿಕೆ 33ನೇ ವಾರ್ಡಿನಲ್ಲಿ ನಿನ್ನೆ ನಡೆಯಿತು. ವಾರ್ಡಿನ ಸರಸ್ವತಿ ನಗರದಲ್ಲಿರುವ ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭಗೊಂಡ ಅಭಿಯಾನವು ವಿವಿಧೆಡೆ ಸಂಚರಿಸಿ ಒಂದೇ ದಿನ 55 ಸಾವಿರ ರೂ.ಗಳನ್ನು ಸಂಗ್ರಹಿಸಿತು. ವಾರ್ಡಿನ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಆರ್.ಎಸ್.ಎಸ್.ನ ರಮೇಶ್ ಅವರುಗಳ ನೇತೃತ್ವದಲ್ಲಿ ಅಭಿಯಾನ ಏರ್ಪಾಡಾಗಿತ್ತು.

## ನಗರದಲ್ಲಿ ಬಿಎಸ್6 ಆಟೋ ಬಿಡುಗಡೆ




ದಾವಣಗೆರೆ, ಜ. 18- ನಗರದ ಬಜಾಜ್ ಆಟೋ ವಾಹನಗಳ ಅಧಿಕೃತ ಮಾರಾಟಗಾರರಾದ ಶ್ರೀ ಗುರು ಮೋಟಾರ್ಸ್‌ನಲ್ಲಿ ಹೊಸ BS6 BI ಇಂಧನ ಶ್ರೇಣಿ ಆಟೋಗಳನ್ನು ಬಜಾಜ್ ಕಂಪನಿ ಪ್ರಾದೇಶಿಕ ವ್ಯವಸ್ಥಾಪಕ ರಾಘವೇಂದ್ರ ಬಿಡುಗಡೆ ಮಾಡಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ ಗ್ರೂಪ್ ಆಫ್ ಫರ್ಮ್ಸ್ ಛೇರ್ಮನ್ ಎನ್.ಜೆ. ಗುರುಸಿದ್ಧಯ್ಯ ಉಪಸ್ಥಿತರಿದ್ದರು.

## ನಗರಕ್ಕೆ ನಾಳೆ ಸಚಿವ ಕೆ.ಎಸ್.ಈಶ್ವರಪ್ಪ

ದಾವಣಗೆರೆ, ಜ.18- ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರು ನಾಡಿದ್ದು ದಿನಾಂಕ 20 ರ ಬುಧವಾರ ನಗರಕ್ಕೆ ಆಗಮಿಸಲಿದ್ದಾರೆ. ಅಂದು ಮಧ್ಯಾಹ್ನ 3.30 ಕ್ಕೆ ನಗರಕ್ಕೆ ಆಗಮಿಸಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವರು. ರಾತ್ರಿ 7 ಗಂಟೆಗೆ ದಾವಣಗೆರೆಯಿಂದ ನಿರ್ಗಮಿಸುವರು.


## ಕೊರೊನಾ ವಾರಿಯರ್ ಕಾಳಾನಾಯ್ಕ ನಿಧನ



ದಾವಣಗೆರೆ, ಜ. 18 – ಕೊರೊನಾ ಸೋಂಕಿಗೆ ಗುರಿಯಾಗಿ ನಂತರದ ಪರಿಣಾಮಗಳಿಂದ ಬಳಲುತ್ತಿದ್ದ ಕೊರೊನಾ ವಾರಿಯರ್ ಕಾಳಾನಾಯ್ಕ ಸಾವನ್ನಪ್ಪಿದ್ದಾರೆ. ಅವರಿಗೆ 53 ವರ್ಷ ವಯಸ್ಸಾಗಿತ್ತು.

ಆರೋಗ್ಯ ಇಲಾಖೆ ಸೇವೆಯಲ್ಲಿದ್ದ ಕೊರೊನಾ ವಾರಿಯರ್ ಕಾಳನಾಯ್ಕ ಅವರು, ಜಗಳೂರು ತಾಲ್ಲೂಕಿನ ಬಿಳಿಚೋಡು ಗ್ರಾಮದ ಪಿ.ಆರ್.ಸಿ.ಯಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ತೀವ್ರ ಉಸಿರಾಟದ ತೊಂದರೆಯಿಂದಾಗಿ ಅವರು ಭಾನುವಾರ ತಡರಾತ್ರಿ 1.45ಕ್ಕೆ ನಿಧನರಾಗಿದ್ದಾರೆ. ಕೊರೊನಾ ಸಂದರ್ಭದಲ್ಲಿ ನಿತ್ಯ ನೂರಾರು ಜನರ ಸ್ವಾಬ್ ಸಂಗ್ರಹಿಸುತ್ತಿದ್ದರು. ಈ ಕರ್ತವ್ಯ ನಿರ್ವಹಣೆ ವೇಳೆ ಸೋಂಕಿಗೂ ತುತ್ತಾಗಿ, ಗುಣಮುಖರಾಗಿದ್ದರು. ಆದರೆ, ಸೋಂಕಿನ ನಂತರದಲ್ಲಿ ಅನಾರೋಗ್ಯಕ್ಕೆ ಸಿಲುಕಿದ್ದರು. ಬಹು ಅಂಗಾಂಗ ವೈಫಲ್ಯಕ್ಕೆ ಗುರಿಯಾಗಿದ್ದ ಅವರು, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

### ನಂದಿಹಳ್ಳಿ ಬಸವನಗೌಡಪ್ಪ ನಿಧನ



ದಾವಣಗೆರೆ ತಾಲ್ಲೂಕು ಕೋಡಿಹಳ್ಳಿ ಗ್ರಾಮದ ವಾಸಿ ನಂದಿಹಳ್ಳಿ ಬಸವನಗೌಡಪ್ಪ (77) ಅವರು ದಿನಾಂಕ 18.01.2021ರ ಸೋಮವಾರ ನಿಧನರಾದರು. ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.01.2021ರ ಮಂಗಳವಾರ ಕೋಡಿಹಳ್ಳಿ ಗ್ರಾಮದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

### ಹೆಚ್.ಎನ್. ಸೀತಮ್ಮ ಸಾವಂತ್ ನಿಧನ



ದಾವಣಗೆರೆ ವಿನಾಯಕ ನಗರ ರಿಂಗ್ ರೋಡ್ ವಾಸಿ ಹೆಚ್.ಜಿ. ನಿಂಗೋಜಿರಾವ್ ಸಾವಂತ್ ಅವರ ಧರ್ಮಪತ್ನಿ ಶ್ರೀಮತಿ ಹೆಚ್.ಎನ್. ಸೀತಮ್ಮ ಸಾವಂತ್ (65) ಅವರು, ದಿನಾಂಕ 18.01.2021 ರ ಸೋಮವಾರ ರಾತ್ರಿ 11.30 ಕ್ಕೆ ನಿಧನರಾದರು. ಪತಿ, ಮೂವರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಮತ್ತು ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.01.2021 ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

### ಉದ್ದಿಮೆ : ನವೀಕರಣಕ್ಕೆ ಕರೆ

ದಾವಣಗೆರೆ, ಜ.18- ಹೋಟೆಲ್, ಬೇಕರಿ, ಜ್ಯೂಸ್ ಸ್ಟಾಲ್, ಅಂಗಡಿಗಳ ಮಾಲೀಕರು ಉದ್ಯಮ ಪರವಾನಿಗೆ ನವೀಕರಣ / ನೂತನ ಉದ್ಯಮ ಪರವಾನಿಗೆಗಳನ್ನು ಮಾಡಿಸಿಕೊಳ್ಳದಿದ್ದಲ್ಲಿ ಸಂಘವು ಪಾಲಿಕೆ ಆರೋಗ್ಯ ವಿಭಾಗದ ಸಹಯೋಗದಲ್ಲಿ ನವೀಕರಣ, ನೂತನ ಪರವಾನಿಗೆ ಪಡೆಯಲು ಸಹಕರಿಸಲಿದೆ. 23 ರೊಳಗೆ ಸಂಘದ ಕಚೇರಿ ಸಂಪರ್ಕಿಸಲು ಕಾರ್ಯದರ್ಶಿ (9945220838), ಜಂಟಿ ಕಾರ್ಯದರ್ಶಿ (7019744707) ತಿಳಿಸಿದ್ದಾರೆ.

## ಸರ್ಕಾರದಿಂದ ಅನುದಾನ ತರಲು ಶಾಸಕರ ನಿರಂತರ ಪ್ರಯತ್ನ ಅಗತ್ಯ

### ಜಿಗಳಿ ಇಂದೂಧರ್

ಮಲೇಬೆನ್ನೂರು, ಜ.18- ಕ್ಷೇತ್ರದ ಅಭಿವೃದ್ಧಿ ಯೋಜನೆಗಳಿಗೆ ಸರ್ಕಾರದಿಂದ ಅನುದಾನ ತರಲು ಶಾಸಕ ಎಸ್. ರಾಮಪ್ಪನವರು ನಿರಂತರ ಹೋರಾಟ ಮಾಡಬೇಕೆಂದು ಜಿಗಳಿಯ ಇಂದೂಧರ್ ಹೇಳಿದರು.

ಪಟ್ಟಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರು ವಿನಾಕಾರಣ ರಾಜ್ಯ ಸರ್ಕಾರ ಅನುದಾನ ನೀಡುತ್ತಿಲ್ಲ, ತಾರತಮ್ಯ ಮಾಡುತ್ತಿದೆ ಎಂಬ ಆರೋಪ ಮಾಡುವುದನ್ನು ಬಿಟ್ಟು, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅನುದಾನ ತರಲು ಪ್ರಯತ್ನಿಸಬೇಕೆಂದರು.

ಉಕ್ಕಡಗಾತ್ರಿ ಗ್ರಾಮದ ತುಂಗಭದ್ರಾ ನದಿಗೆ ತಡೆಗೋಡೆ ನಿರ್ಮಾಣಕ್ಕೆ ಅನುದಾನ ನೀಡುವಂತೆ 2012 ರಿಂದಲೂ ಸರ್ಕಾರದ ಮಟ್ಟದಲ್ಲಿ ನನ್ನ ನಿರಂತರ ಪ್ರಯತ್ನದ ಫಲವಾಗಿ 4 ಕೋಟಿ ರೂ ಅನುದಾನ ಬಿಡುಗಡೆಯಾಗಿದೆ. ಇದರಲ್ಲಿ ಶಾಸಕರ ಪ್ರಯತ್ನ ಇಲ್ಲ ಎಂದು ಹೇಳಿದರು.

ಈ ಹಿಂದೆ ನೀರಾವರಿ ಸಚಿವರಾಗಿದ್ದ ಬಸವರಾಜ್ ಬೊಮ್ಮಾಯಿ, ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ್ ಮತ್ತು ಈಗಿನ ಸರ್ಕಾರದ ಸಚಿವರಾದ ಮಾಧುಸ್ವಾಮಿ ಅವರ ಸಹಾಯ ಇದೆ ಎಂದು ಹೇಳಿದರು.

**ಶಾಸಕರ ಪ್ರತಿಕ್ರಿಯೆ :** ಇಂದೂಧರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಶಾಸಕ ಎಸ್. ರಾಮಪ್ಪ ಸುಳ್ಳು ಹೇಳಿಕೊಂಡು ದೊಡ್ಡವರಾಗಲು ಎಂದಿಗೂ ಸಾಧ್ಯವಿಲ್ಲ. ಇಂತವರನ್ನು ಜನರೂ ನಂಬುವುದಿಲ್ಲ. ಸಚಿವರಾಗಿದ್ದ ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ್ ಅವರ ಬಳಿ ನಾನು ಇಂದೂಧರ್ ಅವರನ್ನು ಕರೆದುಕೊಂಡು ಹೋಗಿ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೆವು. ಈಗ ಈ ರೀತಿ ಸುಳ್ಳು ಹೇಳಿದರೆ ಆ ದೇವರೇ ನೋಡಿಕೊಳ್ಳುತ್ತಾನೆ ಎಂದರು.

## ಪಡಿತರಕ್ಕಾಗಿ ರಾಜ್ಯದ ಭತ್ತ

**(1ನೇ ಪುಟದಿಂದ)** ರೈತರಿಗೂ ಅನುಕೂಲವಾಗುತ್ತದೆ, ಸಾಗಾಣಿಕೆದಾರರಿಗೂ ಅನುಕೂಲವಾಗುತ್ತದೆ ಎಂದರು. ರಾಜ್ಯದಲ್ಲಿ ಬೆಳೆದ ಭತ್ತವನ್ನು ರಾಜ್ಯ ಸರ್ಕಾರವೇ ಖರೀದಿ ಮಾಡುತ್ತದೆ ಎಂಬುದು ಖಚಿತವಾದರೆ ಹೆಚ್ಚಿನ ಯುವಜನತೆ ಕೃಷಿಯಲ್ಲಿ ತೊಡಗಲು ಪ್ರೇರಣೆ ನೀಡಿದಂತಾಗುತ್ತದೆ ಎಂದರು.

ಕೊರೊನಾ ಸಾಂಕ್ರಾಮಿಕದಿಂದ ರಾಜ್ಯ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ, ಇಂತಹ ಸನ್ನಿವೇಶದಲ್ಲಿ ಹೊಸ ಉದ್ಯೋಗಾವಕಾಶ ಸೃಷ್ಟಿಸುವ ಮೂಲಕ ಆರ್ಥಿಕತೆಗೆ ಚೇತರಿಕೆ ನೀಡುವ ಅಗತ್ಯವಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಮುಂಬರುವ ಬಜೆಟ್‌ನಲ್ಲಿ ರಾಜ್ಯದ ಜನರಿಗೆ ಹೊಸ ಶಕ್ತಿ ತುಂಬುವ ಯೋಜನೆಗಳನ್ನು ನೀಡಬೇಕೆಂಬ ಆಲೋಚನೆ ಇದೆ. ಸರ್ಕಾರದ ಆರ್ಥಿಕ ಸ್ಥಿತಿ ಮೇಲೆ ಇದು ಅವಲಂಬಿತವಾಗಲಿದೆ ಎಂದರು.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 15.01.2021ರಂದು ಅಕಾಲಿಕವಾಗಿ ನಿಧನರಾದ
ಜ.ಜ.ಮು. ವೈದ್ಯಕೀಯ ಕಾಲೇಜಿನ ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗದ ಪ್ರಾಧ್ಯಾಪಕರೂ
ಸರಳ, ಸಜ್ಜನ, ಸ್ನೇಹಜೀವಿಯಾಗಿ ಎಲ್ಲರ ಪ್ರೀತಿಪಾತ್ರರಾಗಿದ್ದ

**ಡಾ॥ ಜಿ.ಆರ್. ವೀಣಾ ಅವರಿಗೆ**


ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಮೃತರ ಆತ್ಮಕ್ಕೆ ಚಿರಶಾಂತಿ
ನೀಡಲೆಂದು ಮತ್ತು ಅವರುಗಳ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು
ಭಗವಂತ ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.

- ❖ ಬಸವರಾಜಪ್ಪ ಎಂ.
- ❖ ಎಂ. ವೈ. ಪ್ರಸನ್ನಕುಮಾರ್
- ❖ ಕೆ.ಎಸ್. ಚಂದ್ರಶೇಖರ್
- ❖ ಟಕ್ಕಳಿಕಿ ಶರಣಪ್ಪ
- ❖ ಎಂ. ದಂಡಪ್ಪ
- ❖ ಜಿ.ಎಂ. ರಮೇಶ್
- ❖ ಟಿ. ಶಿವಕುಮಾರ್
- ❖ ಸುಪುತ್ರಪ್ಪ ಕೊಟ್ರೇಶ್
- ❖ ಕಾರಡಗಿ ಕೊಟ್ರೇಶ್
- ❖ ಕೊಡೆಕಲ್ ಚನ್ನಪ್ಪ
- ❖ ಸಂಗಪ್ಪ ಚಿತ್ತರಗಿ
- ❖ ಶಿವನಕೆರೆ ರೇವಣಸಿದ್ದಪ್ಪ
- ❖ ಕೆ.ಬಿ. ವಿರೂಪಾಕ್ಷಪ್ಪ
- ❖ ಕಡ್ಲೆಬಾಳು ಚನ್ನಪ್ಪ
- ❖ ಎಸ್.ಹೆಚ್. ರೇವಣಸಿದ್ದಪ್ಪ
- ❖ ಎನ್.ಸಿ. ರೇವಣಸಿದ್ದಪ್ಪ
- ❖ ಜಿ. ಬಸವರಾಜಪ್ಪ ಅಂಡ್ ಸನ್

**ಮತ್ತಿಹಳ್ಳಿ ಡ್ರಯರ್ಸ್ ಸಿಬ್ಬಂದಿ ವರ್ಗ**




॥ ಶ್ರೀ ವೆಂಕಟೇಶ್ವರ ಪ್ರಸನ್ನ॥





ಶ್ರೀಮದ್ ವೃಷಭಪುರಿ ಸೂರ್ಯ ಸಿಂಹಾಸನಾಧೀಶ್ವರ 1108 ಜಗದ್ಗುರು
ಶ್ರೀ ಶ್ರೀ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಬೃಹನ್ಮಠ-ನಂದಿಗುಡಿ.
ಶ್ರೀ ಶ್ರೀ ಶ್ರೀ ನಂದೀಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಬಾಡದಬೈಲು ಇವರುಗಳ ದಿವ್ಯ ಸಾನಿಧ್ಯದಲ್ಲಿ

## ಹಳ್ಳಿಹಾಳ್ ಗ್ರಾಮದ ಹೆಚ್. ಮಹದೇವಪ್ಪಗೌಡ್ರು ಇವರ ಕೈಲಾಸ ಸಮಾರಾಧನೆ



**ಹೆಚ್. ಮಹದೇವಪ್ಪಗೌಡ್ರು, ಹಳ್ಳಿಹಾಳ್.**
ಮಾಜಿ ಅಧ್ಯಕ್ಷರು, ಶ್ರೀ ನಂದಿ ಪತ್ತಿನ ಸಹಕಾರ ಸಂಘ ನಿ.,
ಮಲೇಬೆನ್ನೂರು. ಹರಿಹರ ತಾ॥
ಜನನ : 01.01.1932 - ಮರಣ ; 08.01.2021

ಆತ್ಮೀಯರೇ.... ನಮ್ಮ ಪೂಜ್ಯ ತಂದೆಯವರಾದ

**ಊರಮುಂದ್ಲರ ಶ್ರೀ ಹೆಚ್. ಮಹದೇವಪ್ಪಗೌಡ್ರು**

ಇವರು ದಿನಾಂಕ : 08.01.2021ರ ಗುರುವಾರ ರಾತ್ರಿ 12.30ಕ್ಕೆ ಶಿವೈಕ್ಯರಾದ
ಪ್ರಯುಕ್ತ ದಿನಾಂಕ : 19.01.2021ನೇ ಮಂಗಳವಾರ ರಾತ್ರಿ ಶಿವಭಜನೆಯನ್ನು
ಏರ್ಪಡಿಸಲಾಗಿದೆ ಹಾಗೂ ಮೃತರ ಆತ್ಮ ಶಾಂತಿಗಾಗಿ

**'ಶಿವಗಣಾರಾಧನೆ'ಯನ್ನು**

**ದಿನಾಂಕ:20.01.2021ನೇ ಬುಧವಾರ ಬೆಳಿಗ್ಗೆ 10.30ಕ್ಕೆ**
**ಹರಿಹರ ತಾ॥ ಹಳ್ಳಿಹಾಳ್ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ**
ಹಮ್ಮಿಕೊಂಡಿರುತ್ತೇವೆ. ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಬಯಸುವ

ಇಂತಿ ದುಃಖತಪ್ತರು :
ಶ್ರೀಮತಿ ಸಾವಿತ್ರಮ್ಮ ಕೋಂ. ದಿ॥ ಶ್ರೀ ಹೆಚ್.ಎಂ. ಚಂದ್ರಗೌಡ ಮತ್ತು ಮಕ್ಕಳು
ಶ್ರೀಮತಿ ಅಕ್ಕಮ್ಮ ಶ್ರೀ ಹೆಚ್.ಎಂ. ನಾಗರಾಜಪ್ಪ ಮತ್ತು ಮಕ್ಕಳು
ಶ್ರೀಮತಿ ಅಶ್ವಿನಿ ಶ್ರೀ ಹೆಚ್.ಎಂ. ಬಸವನಗೌಡ ಮತ್ತು ಮಕ್ಕಳು
ಶ್ರೀಮತಿ ಪ್ರಮೀಳಮ್ಮ ಶ್ರೀ ಎನ್. ಶೇಖರಪ್ಪ ಮತ್ತು ಮಕ್ಕಳು
ಊರಮುಂದ್ಲರ ವಂಶಸ್ಥರು, ಹಳ್ಳಿಹಾಳ್ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಮಲೇಬೆನ್ನೂರಿನಲ್ಲಿ 69 ಜನರಿಗೆ ಲಸಿಕೆ



ಮಲೇಬೆನ್ನೂರು, ಜ.18 - ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೋಮವಾರ 69 ಜನರಿಗೆ ಕೋವಿಡ್ ಲಸಿಕೆ ನೀಡಲಾಯಿತು. ನಾಲ್ವರು ವೈದ್ಯರಿಗೆ, 14 ಜನ ಆರೋಗ್ಯ ಕಾರ್ಯಕರ್ತರಿಗೆ 8 ಜನ ಗ್ರೂಪ್ ಡಿ ನೌಕರರಿಗೆ, ಓರ್ವ ವಾಹನ ಚಾಲಕನಿಗೆ ಮತ್ತು 30 ಆಶಾ ಹಾಗೂ 10 ಜನ ಅಂಗನವಾಡಿ ಕಾರ್ಯಕರ್ತರಿಗೆ ಲಸಿಕೆ ನೀಡಿ, 30 ನಿಮಿಷ ನೇರ ನಿಗಾವಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಮಲೇರಿಯಾ ಅಧಿಕಾರಿಗಳೂ ಆದ ತಾ.ನೋಡಲ್ ಅಧಿಕಾರಿ ಡಾ.ನಟರಾಜ್ ಅವರು, ಈಗ ಲಸಿಕೆ ಪಡೆದುಕೊಂಡವರು 28 ದಿನಗಳ ನಂತರ 2ನೇ ಡೋಜ್ ಪಡೆದುಕೊಳ್ಳಬೇಕು. ಸಣ್ಣ-ಪುಟ್ಟ ತೊಂದರೆ ಕಂಡು ಬಂದರೆ ಕೂಡಲೇ ವೈದ್ಯರ ಸಲಹೆ ಪಡೆಯಬೇಕು.

ಜಿಲ್ಲೆಯಲ್ಲಿ ಇದುವರೆಗೆ ಲಸಿಕೆ ಪಡೆದುಕೊಂಡವರ ಪೈಕಿ 3-4 ಜನರಿಗೆ ಜ್ವರ ಮೈ-ಕೈ ನೋವಿನಂತಹ ಸಣ್ಣ-ಪುಟ್ಟ ತೊಂದರೆ ಬಿಟ್ಟರೆ ಬೇರೆ ಯಾವುದೇ ಅಡ್ಡ ಪರಿಣಾಮ ಆಗಿಲ್ಲ. ಹೆಮ್ಮಾರಿ ಕೊರೊನಾ ಹೊಡೆದೋಡಿಸಲು ಭಯ ಬಿಟ್ಟು ಲಸಿಕೆ ತೆಗೆದುಕೊಳ್ಳಿ ಎಂದು ಮನವಿ ಮಾಡಿದ ಡಾ. ನಟರಾಜ್ ಅವರು, ಮಂಗಳವಾರ ಹರಿಹರದ ಸಾರ್ವಜನಿಕ ಆಸ್ಪತ್ರೆಯಲ್ಲಿ 200 ಅಂಗನವಾಡಿ ಕಾರ್ಯಕರ್ತರಿಗೆ ಈ ಲಸಿಕೆ ನೀಡಲಾಗುವುದೆಂದರು. ಟಿಹೆಚ್‌ಓ ಡಾ. ಚಂದ್ರಮೋಹನ್, ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಪುರಸಭೆ ಅಧ್ಯಕ್ಷೆ ನಾಹೀದಾ ಅಂಜುಂ , ಉಪಾಧ್ಯಕ್ಷೆ ಆಂಜನಮ್ಮ, ಮುಖ್ಯಾಧಿಕಾರಿ ಧರಣೇಂದ್ರ ಕುಮಾರ್, ಉಪ ತಹಶೀಲ್ದಾರ್ ಆರ್.ರವಿ, ಹಿರಿಯ ಆರೋಗ್ಯ ಸಹಾಯಕ ಎಂ.ಉಮಣ್ಣ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಹೆಚ್.ಪಾಟೀಲ್, ಕಿರಿಯ ಆರೋಗ್ಯ ಸಹಾಯಕ ದಾದಾಪೀರ್ ಈ ವೇಳೆ ಹಾಜರಿದ್ದರು.

# ಲೆದರ್ ಬಾಲ್ ಕ್ರಿಕೆಟ್ : 4 ತಂಡಗಳು ಸೆಮಿಫೈನಲ್ಸ್‌ಗೆ

ದಾವಣಗೆರೆ, ಜ.18- ನಗರದ ಮಯೂರ ಕ್ರಿಕೆಟ್ ಕ್ಲಬ್ ಸಂಕ್ರಾಂತಿ ಪ್ರಯುಕ್ತ ಹಮ್ಮಿಕೊಂಡಿರುವ 16 ವರ್ಷದ ಒಳಗಿನ ಬಾಲಕರ ಲೆದರ್ ಬಾಲ್ ಕ್ರಿಕೆಟ್ ಟೂರ್ನಿಯಲ್ಲಿ ನಾಲ್ಕು ತಂಡಗಳು ಸೆಮಿಫೈನಲ್ಸ್ ಪ್ರವೇಶಿಸಿವೆ.

ದಾವಣಗೆರೆ ಕ್ರಿಕೆಟ್ ಅಕಾಡೆಮಿ, ದಾವಣಗೆರೆ ಯುನೈಟೆಡ್ ಕ್ರಿಕೆಟ್ ಅಕಾಡೆಮಿ, ಚಿತ್ರದುರ್ಗ ದ ಮದಕರಿ ಕ್ರಿಕೆಟ್ ಅಕಾಡೆಮಿ ಮತ್ತು ಬಳ್ಳಾರಿಯ ಡಾ.ಮಸ್ತಿಕರ್ ಕ್ರಿಕೆಟ್ ಅಕಾಡೆಮಿ ತಂಡಗಳು ಪ್ರಬಲ ಪೈಪೋಟಿಯ ನಡುವೆಯೂ ಲೀಗ್ ಹಂತದ ಪಂದ್ಯಗಳನ್ನು ಜಯಿಸಿ ಮಂಗಳವಾರದಿಂದ ಆರಂಭಗೊಳ್ಳಲಿರುವ ಸೆಮಿಫೈನಲ್ಸ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಕಳಪೆ ಪ್ರದರ್ಶನ ತೋರಿದ ದಾವಣಗೆರೆ ವೀನಸ್ ಅಕಾಡೆಮಿ ಮತ್ತು ತುಮಕೂರು ತಂಡಗಳು ಟೂರ್ನಿಯಿಂದ ಹೊರಬಿದ್ದಿವೆ. ಸೋಮವಾರ ನಡೆದ ಲೀಗ್ ಹಂತದ ಮೊದಲ ಪಂದ್ಯದಲ್ಲಿ ಆರಂಭಿಕ ಬ್ಯಾಟಿಂಗ್ ಮಾಡಿದ ದಾವಣಗೆರೆ ಯುನೈಟೆಡ್ ಹುಡುಗರು ನಿಗದಿತ 25 ಓವರ್ ಗಳಲ್ಲಿ 9 ವಿಕೆಟ್ ನಷ್ಟಕ್ಕೆ 131 ರನ್ ಕಲೆ ಹಾಕಿದರು. ಆದರ್ಶ ಪಾಟೀಲ್ 69 ರನ್ ಗಳ ಉತ್ತಮ ಕಾಣಿಕೆ ನೀಡಿದರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಮಸ್ತಿಕರ್ ಬಾಯ್ಸ್ ಇನ್ನೂ7 ಎಸೆತಗಳು ಬಾಕಿ ಇರುವಂತೆಯೇ 2 ವಿಕೆಟ್ ಗಳ ನಷ್ಟಕ್ಕೆ 132 ರನ್ ಗಳಿಸಿ ಸೆಮಿಫೈನಲ್ಸ್ ಹಾದಿ ಸುಗಮ ಮಾಡಿಕೊಂಡಿತು. ಲಕ್ಷ್ಮಿ ಸಾಗರ್ ಬಾರಿಸಿದ 80 ರನ್ನುಗಳು ಮಸ್ತಿಕರ್ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದವು.

ದಾವಣಗೆರೆ ಕ್ರಿಕೆಟ್ ಅಕಾಡೆಮಿ ಮತ್ತು ತುಮಕೂರು ಅಕಾಡೆಮಿ ತಂಡಗಳ ನಡುವೆ ನಡೆದ ಎರಡನೇ ಪಂದ್ಯದಲ್ಲಿ ದಾವಣಗೆರೆ ಹುಡುಗರು ನಿಗದಿತ 25 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 130 ರನ್ ಗಳಿಸಿದರು. ಈ ಸಾಧಾರಣ ಮೊತ್ತ ಬೆನ್ನತ್ತಿದ ತುಮಕೂರು ತಂಡ 25 ಓವರ್ ಗಳಲ್ಲಿ 8 ವಿಕೆಟ್ ಗಳ ನಷ್ಟಕ್ಕೆ 128 ರನ್ ಗಳಿಸುವ ಮೂಲಕ ಕೇವಲ 2 ರನ್ನುಗಳ ಅಂತರದಿಂದ ಸೋತು ಸೆಮಿಫೈನಲ್ಸ್ ಆಸೆಯನ್ನು ಕೈ ಚೆಲ್ಲಿತು.

ತುಮಕೂರು ಪರವಾಗಿ ಜೀವನ್‌ಜೈನ್ 53 ರನ್ ಕಾಣಿಕೆ ನೀಡಿದರಾದರೂ ತಂಡವನ್ನು ಗೆಲ್ಲಿಸುವಲ್ಲಿ ವಿಫಲರಾದರು. ದಾವಣಗೆರೆ ಪರವಾಗಿ ಮಾರಕ ಬೌಲಿಂಗ್ ದಾಳಿ ನಡೆಸಿದ ವೆಂಕಟೇಶ್ ನೇಕಾರ್ 5 ಓವರ್ ಗಳಲ್ಲಿ 20 ರನ್ ನೀಡಿ 3 ಪ್ರಮುಖ ವಿಕೆಟ್ ಕಿತ್ತರು. ಈ ಮೂಲಕ ದಾವಣಗೆರೆ ಕ್ರಿಕೆಟ್ ಅಕಾಡೆಮಿ 8 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಜಿಗಿದಿದೆ. ಈ ಸೋಲಿನೊಂದಿಗೆ ತುಮಕೂರು ತಂಡ ಟೂರ್ನಿಯಿಂದ ಹೊರ ಬಿದ್ದಿತು.

ದಾವಣಗೆರೆ ಕ್ರಿಕೆಟ್ ಅಕಾಡೆಮಿ 8 ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿ, ಚಿತ್ರದುರ್ಗದ ಮದಕರಿ ಅಕಾಡೆಮಿ 7 ಅಂಕಗಳೊಂದಿಗೆ 2 ನೇ ಸ್ಥಾನದಲ್ಲಿ, ದಾವಣಗೆರೆ ಯುನೈಟೆಡ್ ಅಕಾಡೆಮಿ 6 ಅಂಕಗಳೊಂದಿಗೆ 3 ನೇ ಸ್ಥಾನದಲ್ಲಿ ಮತ್ತು ಬಳ್ಳಾರಿಯ ಡಾ.ಮಸ್ತಿಕರ್ ಅಕಾಡೆಮಿ 5 ಅಂಕಗಳೊಂದಿಗೆ 4 ನೇ ಸ್ಥಾನದಲ್ಲಿವೆ.

ಮಂಗಳವಾರ ಇಂದಿನಿಂದ ಬಾಪೂಜಿ ಎಂಬಿಎ ಟರ್ಫ್ ಅಂಗಳದಲ್ಲಿ ಮೊದಲ ಸೆಮಿಫೈನಲ್ಸ್ ಪಂದ್ಯ ದಾವಣಗೆರೆ ಕ್ರಿಕೆಟ್ ಅಕಾಡೆಮಿ ಮತ್ತು ಬಳ್ಳಾರಿಯ ಡಾ.ಮಸ್ತಿಕರ್ ಅಕಾಡೆಮಿ ನಡುವೆ ಮತ್ತು ಎರಡನೇ ಸೆಮಿಫೈನಲ್ಸ್ ಪಂದ್ಯ ದಾವಣಗೆರೆ ಯುನೈಟೆಡ್ ಅಕಾಡೆಮಿ ಹಾಗೂ ಚಿತ್ರದುರ್ಗದ ಮದಕರಿ ಅಕಾಡೆಮಿ ತಂಡಗಳ ನಡುವೆ ನಡೆಯಲಿದೆ ಎಂದು ಟೂರ್ನಿಯ ಆಯೋಜಕರಾದ ದಿನೇಶ್ ಕೆ. ಶೆಟ್ಟಿ, ಹುಚ್ಚವ್ವನಹಳ್ಳಿ ಮಂಜುನಾಥ್, ಎಲ್. ಪ್ರಕಾಶ್, ಬಸವರಾಜ್ ತಿಳಿಸಿದ್ದಾರೆ.

# ಧನ್ಯೋಸ್ಮಿ ಭರತ ಭೂಮಿ ಸಂಘಟನೆಯಿಂದ ತುಂಗಭದ್ರಾ ನದಿ ಸ್ವಚ್ಛತಾ ಆಂದೋಲನ




ಹರಿಹರ, ಜ.18- ಧನ್ಯೋಸ್ಮಿ ಭರತ ಭೂಮಿ ಸಂಘಟನೆಯ ವತಿಯಿಂದ ಕಾರ್ಯಕರ್ತರೆಲ್ಲ ಸೇರಿ ಕುಮಾರಪಟ್ಟಣದ ವಿದ್ಯಾನಗರ ಬಳಿ ತುಂಗಭದ್ರಾ ನದಿ ದಡದಲ್ಲಿ ಸ್ವಚ್ಛತಾ ಆಂದೋಲನ ಕೈಗೊಳ್ಳಲಾಗಿತ್ತು. ಪಂಚಾಯಿತಿ ಅಧ್ಯಕ್ಷ ಚೇತನ್ ಪೂಜಾರ್ ಸ್ವಚ್ಛತಾ ಆಂದೋಲನಕ್ಕೆ ಚಾಲನೆ ನೀಡಿದರು.

ಸಂಘಟನೆಯ ಅಧ್ಯಕ್ಷ ಚರಣರಾಜ ಅಂಗಡಿ ಮಾತನಾಡಿ, ಪ್ರತಿ ಭಾನುವಾರ ಒಂದಿಲ್ಲೊಂದು ಸಂಘಟನೆಗಳು ನದಿ ತೀರದಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡಿದುದರ ಫಲವಾಗಿ ಈ ಬಾರಿ ಕಸ ಕಡ್ಡಿ ಹಳೇಯ ಬಟ್ಟೆ ಪ್ಲಾಸ್ಟಿಕ್ ಮೊದಲಾದ ತ್ಯಾಜ್ಯಗಳು ಅಷ್ಟಾಗಿ ಕಂಡುಬಂದಿಲ್ಲ ಎಂದು ಅಭಿಪ್ರಾಯಪಟ್ಟರು. ಸಾರ್ವಜನಿಕರು ಹೀಗೆಯೇ ಪರಿಸರ ಸ್ವಚ್ಛತೆಗೆ ಕೈ ಜೋಡಿಸಿದಲ್ಲಿ ನದಿ ತಟದಲ್ಲಿ ತ್ಯಾಜ್ಯ ಸಂಗ್ರಹಣೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ ಎಂದರು.

ಮಿಥುನ ಕಟವಟೆ ಮಾತನಾಡಿ, ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಇನ್ನೂ ಹೆಚ್ಚು ಮೂಡಬೇಕಿದೆ. ಆಗ ಮಾತ್ರ ಸ್ವ-ಇಚ್ಛೆಯಿಂದ ಕಂಡ ಕಂಡಲ್ಲಿ ಕಸ, ಇತರೆ ವಸ್ತುಗಳನ್ನು ಚೆಲ್ಲುವುದನ್ನು ನಿಲ್ಲಿಸಬಹುದು. ಪರಿಸರ ಸ್ವಚ್ಛತೆಯಿಂದ ಸೊಳ್ಳೆಗಳು ಕಡಿಮೆಯಾಗುವ ಸಾಧ್ಯತೆ ಇದೆ ಎಂದರು.

ನದಿ ತಟದಲ್ಲಿ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಗ್ರಾಮ ಪಂಚಾಯತಿ ವಾಹನಕ್ಕೆ ತುಂಬಿಸಲಾಯಿತು. ಪರಿಸರ ಪ್ರೇಮಿ ಡಾ.ಜಿ.ಜೆ. ಮೆಹೆಂದಳೆ, ವಿಜಯ್ ಕೆ. ಬಾತಿ, ಮಿಥುನ ಕಟವಟೆ, ಗುರುಪ್ರಸಾದ್ ಅನ್ವೇರಿ, ಅನೂಪ ಪೂಜಾರ್, ವಿಜಯಕುಮಾರ್ ಉದಗಟ್ಟಿ, ಸಿದ್ದೇಶ್ ಕುಂಬಾರ್, ಗದಿಗೇಶ್ ಅಂಗಡಿ, ಹರ್ಷ ಆರ್.ಆರ್, ಮಧು ಚಳಗೇರಿ, ನಾಗರಾಜ್ ಕುಂಬಾರ, ಗದಿಗೇಶ್, ಅಜಯ್ ಮತ್ತು ಇತರರು ಪಾಲ್ಗೊಂಡಿದ್ದರು.

# ರಾಣೇಬೆನ್ನೂರು ತಾಲ್ಲೂಕು ಪಂಚಾಯಿತಿ ಸಭೆ: ಸದಸ್ಯರ ನಿರಾಸಕ್ತಿ



ರಾಣೇಬೆನ್ನೂರು, ಜ.18 - ಅಕಾಲಿಕ ಮಳೆಯಿಂದಾಗಿ ತಾಲ್ಲೂಕಿನ 844 ಹೆಕ್ಟೇರ್ ಜಮೀನಿನಲ್ಲಿ ಬೆಳೆ ನಾಶವಾಗಿದೆ. ಕಂದಾಯ ಇಲಾಖೆಯ ಜೊತೆ ಸೇರಿ ರೈತರ ಜಮೀನುಗಳಿಗೆ ತೆರಳಿ ಪರಿಶೀಲಿಸಿ ವರದಿ ತಯಾರಿಸುತ್ತಿದ್ದು, ಇನ್ನೊಂದು ವಾರದಲ್ಲಿ ಸರ್ಕಾರಕ್ಕೆ ಕಳಿಸಲಾಗುವದು ಎಂದು ಕೃಷಿ ಅಧಿಕಾರಿ ಎಸ್.ಎಂ. ಗೌಡಪ್ಪಳವರ ಸಭೆಗೆ ತಿಳಿಸಿದರು.

ಶಾಲೆಗಳಲ್ಲಿ ಶೌಚಾಲಯಗಳನ್ನು ಹೊಸದಾಗಿ ನಿರ್ಮಿಸುವುದಕ್ಕಿಂತ ಈಗಿರುವ ಶೌಚಾಲಯಗಳನ್ನು ನಿರ್ವಹಿಸಲು ಗಮನ ಕೊಡಬೇಕಿದೆ. ಸರ್ಕಾರ ಕೈಗೊಂಡಿರುವ ಯೋಜನೆಗಳಿಗೆ ರಕ್ಷಣೆ ಬೇಕಿದೆ ಎಂದು ಇಂದು ನಡೆದ ತಾಪಂ ಸಭೆಯಲ್ಲಿ ಒಂದಿಬ್ಬರು ಸದಸ್ಯರು ಮಾತನಾಡಿದರು. ಸಭೆಗೆ ಬರದ ಅಧಿಕಾರಿಗಳ ಬಗ್ಗೆ ಕ್ರಮ ಜರುಗಿಸಲು ಪ್ರಸ್ತಾಪಿಸಲಾಯಿತು.

ಪ್ರಸಕ್ತ ಜಿ.ಪಂ ಹಾಗೂ ತಾ.ಪಂಗಳ ಅವಧಿ ಮುಗಿಯುತ್ತಾ ಬಂದಿದ್ದು, ಇಲ್ಲಿನ ತಾಪಂ ಸದಸ್ಯರು ಸಭೆಯಲ್ಲಿ ಯಾವುದೇ ಚರ್ಚೆ, ಪ್ರಶ್ನೆಗಳಿಗೆ ಆದ್ಯತೆ ಕೊಡದೇ ಕಾಟಾಚಾರದ ಸಭೆ ನಡೆಸಿದಂತೆ ಕಂಡು ಬಂದಿತು.

ಇಂದಿನ ಹಾಗೂ ಕಳೆದ ಸಭೆಯ ಕೋರಂ ಭರ್ತಿಗಾಗಿ ಅಧ್ಯಕ್ಷರು ಗಂಟೆಗಟ್ಟಲೇ ಕಾಯುವಂತಾಯಿತು.ಅನೇಕ ಸದಸ್ಯರಿಗೆ ತಾವು ಮತ್ತೆ ಸ್ಪರ್ಧಿಸಲು ಮೀಸಲಾತಿ ಬದಲಾಗಬಹುದು. ಅನೇಕರಿಗೆ ಇತರೆ ಆಕಾಂಕ್ಷಿಗಳಿಂದ ತಡೆ ಉಂಟಾಗಬಹುದು. ಒಬ್ಬಿಬ್ಬರಿಗೆ ಜಿಪಂ ಪ್ರವೇಶದ ಕನಸು, ಹೀಗೆ ನಿರಾಸಕ್ತಿಗೆ ಅನೇಕ ಕಾರಣಗಳು ಹರಿದಾಡಿದವು.

ಅಧ್ಯಕ್ಷೆ ಗೀತಾ ಲಮಾಣಿ, ಉಪಾಧ್ಯಕ್ಷೆ ಕಸ್ತೂರಿ ಹೊನ್ನಾಳಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಜ್ಯೋತಿ ಗಂಜಾಮದ, ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್. ಮಲ್ಲಾಡದ್ ವೇದಿಕೆಯಲ್ಲಿದ್ದರು. ಮ್ಯಾನೇಜರ್ ಬಸವರಾಜ ಶಿಡೇನೂರ ಸ್ವಾಗತಿಸಿದರು.

### ನಿಯಮ ಪಾಲಿಸಿ ರಸ್ತೆ ಸುರಕ್ಷತೆ ಕಾಪಾಡುವಂತೆ ಜನಜಾಗೃತಿ

# ಜಿಲ್ಲಾ ಪೊಲೀಸರಿಂದ ಬೈಕ್ ಜಾಥಾ



ದಾವಣಗೆರೆ, ಜ.18- ಸಂಚಾರ ನಿಯಮಗಳನ್ನು ತಪ್ಪದೇ ಪಾಲಿಸುತ್ತಾ ಸುರಕ್ಷಿತವಾಗಿ ರಸ್ತೆಗಳಲ್ಲಿ ಸಂಚರಿಸಿ ಜೀವ ರಕ್ಷಿಸಿಕೊಳ್ಳುವಂತೆ ಜಿಲ್ಲಾ ಪೊಲೀಸರು ಬೈಕ್ ಸವಾರಿ ಮುಖೇನ ಇಂದು ನಗರ ಸಂಚಾರ ಮಾಡಿ ಜನಜಾಗೃತಿ ಮೂಡಿಸಿದರು.

ಜಿಲ್ಲಾ ಪೊಲೀಸ್ ವತಿಯಿಂದ 32ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಮಾಸಾಚರಣೆ-2021ರ ಪ್ರಯುಕ್ತ ಇಲಾಖೆಯ ಬೈಕ್ ಜೊತೆಗೆ ವಿವಿಧ ದುಬಾರಿ ಬೈಕ್ ಗಳನ್ನೇರಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜಾಥಾ ಮುಖಾಂತರ ಜನಾಕರ್ಷಿಸಿ, ಸಂಚಾರ ನಿಯಮ ಉಲ್ಲಂಘಿಸಿದರೆ ಅಪಘಾತ, ಜೀವ ಹಾನಿ ಸಂಭವಿಸುವುದು. ಸಂಚಾರ ನಿಯಮ ಪಾಲಿಸಿದರೆ ರಸ್ತೆ ಸುರಕ್ಷತೆ ಜೊತೆಗೆ ಜೀವ ಸುರಕ್ಷಿತವಾಗಿರುವುದು ಎಂಬ ಸಂದೇಶ ಸಾರಿದರು.

ಹೈಸ್ಕೂಲ್ ಮೈದಾನದ ಬಳಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ. ರಾಜೀವ್ ಈ ಜಾಥಾಗೆ ಚಾಲನೆ ನೀಡಿ ಮಾತನಾಡುತ್ತಾ, ಸಂಚಾರ ನಿಯಮ ಉಲ್ಲಂಘನೆ ತಡೆಗಾಗಿ ದಂಡ, ಜಾಗೃತಿ, ಮನವರಿಕೆ ಹೀಗೆ ನಾನಾ ರೀತಿಯಲ್ಲಿ ಜನ ರಕ್ಷಿಸುವಲ್ಲಿ ಪೊಲೀಸ್ ಇಲಾಖೆ ಸದಾ ಕಾರ್ಯಪ್ರವೃತ್ತವಾಗಿರಲಿದೆ. ಆದರೆ, ಜನರು ತಮ್ಮ ಜೀವ ರಕ್ಷಣೆಗೆ ತಾವೇ ಸ್ವಯಂ ಪ್ರೇರಿತರಾಗಿ ಸಂಚಾರ ನಿಯಮ ಪಾಲಿಸಲು ಮುಂದಾಗಬೇಕು. ಉಲ್ಲಂಘನೆಯಿಂದ ತಮ್ಮ ಜೀವಕ್ಕೆ ಆಪತ್ತು ಎಂಬ ಅರಿವಿರಬೇಕು ಎಂದು ತಿಳಿಸಿದರು.

ಎಸಿ ಕ್ರಾಸ್, ಪಿಜೆ ಕ್ರಾಸ್, ಅರುಣಾ ವೃತ್ತ, ಕೋರ್ಟ್ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಆರ್ ಟಿಓ ವೃತ್ತ, ಹೊಂಡದ ವೃತ್ತ, ದುರ್ಗಾಂಭಿಕಾ ದೇವಸ್ಥಾನ, ಹಗೆದಿಬ್ಬ ವೃತ್ತ, ಓಲ್ಡ್ ಬೇತೂರು ರಸ್ತೆ, ಅರಳಿ ಮರ ವೃತ್ತ, ವೆಂಕಟೇಶ್ವರ ವೃತ್ತ, ಬಂಬೂಬಜಾರ್ ರಸ್ತೆ ಸೇರಿದಂತೆ ನಗರದ ವಿವಿಧ ಪ್ರಮುಖ ರಸ್ತೆಗಳಲ್ಲಿ ಜಾಥಾ ನಡೆಸಲಾಯಿತು.

ಜಾಥಾದಲ್ಲಿ ಆರ್ ಟಿಓ ಅಧಿಕಾರಿ ಶ್ರೀಧರ್, ನಗರ ಡಿವೈಎಸ್ಪಿ ನಾಗೇಶ್ ಐತಾಳ್, ಚನ್ನಗಿರಿ ಡಿವೈಎಸ್ಪಿ ಪ್ರಶಾಂತ್ ಮುನ್ನೋಳಿ, ಪೊಲೀಸ್ ನಿರೀಕ್ಷಕರುಗಳಾದ ತಿಮ್ಮಣ್ಣ, ಗಜೇಂದ್ರಪ್ಪ, ಸುರೇಶ್ ಸಗರಿ, ನಾಗಪ್ಪ ಬಂಕಾಳಿ, ಪಿಎಸ್ ಐಗಳಾದ ಶ್ರೀಧರ್, ಇಮ್ರಾನ್, ಜಯಶೀಲ, ಸತೀಶ್ ಬಾಬು ಸೇರಿದಂತೆ ಸಂಚಾರ ಪೊಲೀಸ್ ಮತ್ತು ಆರ್ ಟಿಓ ಸಿಬ್ಬಂದಿಗಳು ಇದ್ದರು.

# ಜಗಳೂರು ತಾಲ್ಲೂಕಿನಲ್ಲಿ ಸರ್ಕಾರಿ ಬಸ್ ಡಿಪೋಗಾಗಿ ಮನವಿ



ದಾವಣಗೆರೆ, ಜ.18- ಜಗಳೂರು ತಾಲ್ಲೂಕಿನಲ್ಲಿ ಸರ್ಕಾರಿ ಬಸ್ ಡಿಪೋ ಪ್ರಾರಂಭಿಸುವಂತೆ ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್ ಐ) ವತಿಯಿಂದ ನಗರದಲ್ಲಿಂದು ನೂತನ ಬಸ್ ನಿಲ್ದಾಣ ಉದ್ಘಾಟನೆಗೆ ಆಗಮಿಸಿದ ಸಾರಿಗೆ ಸಚಿವ ಲಕ್ಷ್ಮಣ್ ಸವದಿ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮಂಡಳಿ ಅಧ್ಯಕ್ಷ ಚಂದ್ರಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

ಜಗಳೂರು ತಾಲ್ಲೂಕಿನ ಪ್ರತಿಯೊಂದು ಗ್ರಾಮಗಳಿಗೆ ಸರ್ಕಾರಿ ಬಸ್ ಗಳ ಸೇವೆ ಒದಗಿಸಬೇಕು ಹಾಗೂ ಜಗಳೂರಿನಲ್ಲಿ ಶೀಘ್ರವಾಗಿ ಸರ್ಕಾರಿ ಬಸ್ ಡಿಪೋ ಮಾಡಲು ಸ್ಥಳ ಗುರುತಿಸಿ ಅದನ್ನು ಅಂತಿಮಗೊಳಿಸಿ ಗುದ್ದಲಿ ಪೂಜೆ ಮಾಡಿ ಕಾರ್ಯ ಪ್ರಾರಂಭ ಮಾಡಬೇಕು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಜಗಳೂರು ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದಲ್ಲಿಯೇ ಪಾಸ್ ಕೌಂಟರ್ ತೆರೆಯಬೇಕು ಎಂದು ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸರ್ಕಾರಿ ಬಸ್ ಉಳಿವಿಗಾಗಿ ಹಾಗೂ ಡಿಪೋ ಹೋರಾಟ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ಎಸ್ ಎಫ್ ಐ ಜಿಲ್ಲಾ ಮುಖಂಡರಾದ ಲಕ್ಷ್ಮಣ್ ನಾಯ್ಕ್, ಬಿ.ಎಮ್. ಅನಂತ ರಾಜ್, ಮೈಲೇಶ್, ಜಗಳೂರು ತಾಲ್ಲೂಕು ಅಧ್ಯಕ್ಷ ತಮಲೆಹಳ್ಳಿ ಅಂಜಿನಪ್ಪ, ಸಿಐಟಿಯು ಮುಖಂಡ ಕೆ.ಹೆಚ್. ಆನಂದರಾಜು ಸೇರಿದಂತೆ ಇತರರರಿದ್ದರು.

# ಯೋಜನೆಗಳ ಅನುಷ್ಠಾನಕ್ಕಾಗಿ ಪಿಂಚಣಿ ಅದಾಲತ್

ದಾವಣಗೆರೆ ಜ. 18 - ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಉದ್ದೇಶದಿಂದ ಜ.22 ರಂದು ದಾವಣಗೆರೆ ತಾಲ್ಲೂಕಿನ ಆನಗೋಡು ಮತ್ತು ಮಾಯಕೊಂಡ ಹಾಗೂ ಇದೇ ದಿನಾಂಕ 29 ರಂದು ಕಸಬಾ ಉತ್ತರ/ದಕ್ಷಿಣ ಹೋಬಳಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಬರುವ ವಿವಿಧ ಯೋಜನೆಗಳಾದ ವೃದ್ದಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ, ವಿಧವಾ ವೇತನ, ಅಂಗವಿಕಲ ವೇತನ, ಮೈತ್ರಿ, ಮನಸ್ವಿನಿ, ಅಂತ್ಯ ಸಂಸ್ಕಾರ, ಆದರ್ಶ ವಿವಾಹ, ಆಮ್ ಆದ್ಮಿ ಬಿಮಾ ಯೋಜನೆ ಮತ್ತು ರಾಷ್ಟ್ರೀಯ ಕುಟುಂಬ ನೆರವು ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಪಿಂಚಣಿ ಅದಾಲತ್ ಕಾರ್ಯಕ್ರಮವನ್ನು ಜ.22 ರಂದು ಆನಗೋಡು ಮತ್ತು ಮಾಯಕೊಂಡ ಹಾಗೂ ಜ.29 ರಂದು ಕಸಬಾ ಉತ್ತರ/ದಕ್ಷಿಣ ಹೋಬಳಿಗಳಲ್ಲಿ ದಾವಣಗೆರೆ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಖುದ್ದಾಗಿ ಹಾಜರಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಮಾಹಿತಿ ಪಡೆದಿಕೊಳ್ಳಲು ತಹಶೀಲ್ದಾರ್ ಗ್ರೇಡ್-2 ದಾವಣಗೆರೆ ಇವರು ತಿಳಿಸಿದ್ದಾರೆ.

# ದುಃಖಿತರ ದುಃಖ ಹೆಚ್ಚಿಸದೆ ನಿವಾರಿಸೋಣ

- ಶಿವನಕೆರೆ ಬಸವಲಿಂಗಪ್ಪ
ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ.



'ಜಾತಸ್ಯ ಮರಣಂ ಧ್ರುವಂ'. ಮನುಷ್ಯ ಹುಟ್ಟಿದ ಕ್ಷಣದಿಂದ ಸಾಗುವುದೇ ಮರಣದ ಕಡೆಗೆ. ಭೂಮಿಯ ಮೇಲೆ ಹುಟ್ಟಿದವರೆಲ್ಲ ಒಂದಲ್ಲಾ ಒಂದು ದಿನ ಸಾಯುವುದು ನಿಶ್ಚಿತ. ಆದರೆ, ಜೀವನದಲ್ಲಿ ಇನ್ನೂ ಏನೇನೋ ಆಸೆ, ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದು, ಇತ್ತೀಚೆಗೆ ಧಾರವಾಡದ ಸಮೀಪ ಶುಕ್ರವಾರ ರಸ್ತೆ ಅಪಘಾತದಲ್ಲಿ ದಾವಣಗೆರೆ ನಗರದ 12 ಕುಟುಂಬಗಳ 45ರ ಆಸು ಪಾಸಿನ ಪ್ರೀತಿ ರವಿಕುಮಾರ್, ಪರಂಜ್ಯೋತಿ, ವರ್ಷಿತಾ, ಮಂಜುಳಾ, ರಾಜೇಶ್ವರಿ, ಡಾ. ವೀಣಾ ಪ್ರಕಾಶ್, ಕ್ಷರಾ, ಹೇಮಲತಾ, ಯಶ್ಮತಾ ಮುಂತಾದ ಮಹಿಳೆಯರು ಮತ್ತು ಇಬ್ಬರು ಪುರುಷರು ದುರ್ಮರಣ ಹೊಂದಿರುವುದು ನಗರಕ್ಕೆ ಬರಸಿಡಿಲು ಬಡಿದಂತಾಗಿದೆ. ಇಂತಹ ಘೋರ ಅಪಘಾತ, ಆಘಾತ ಯಾರಿಗೂ ಆಗಬಾರದು. 12 ಮನೆಗಳ ಲಕ್ಷ್ಮಿಯರು ತಮ್ಮ ಕುಟುಂಬಗಳನ್ನು ಅಗಲಿ 14 ಕುಟುಂಬಗಳನ್ನು ಅನಾಥವಾಗಿ ಮಾಡಿರುವುದು ನೋವಿನ ಸಂಗತಿ.

ಒಂದು ಮನೆಗೆ ಹೆಣ್ಣಿನ ಮಹತ್ವ ಎಷ್ಟಿದೆ ಎಂದು ಎಲ್ಲರಿಗೂ ತಿಳಿದೇ ಇದೆ. 'ಹೆಣ್ಣಿಂದ ಇಹವು, ಹೆಣ್ಣಿಂದ ಪರವು, ಹೆಣ್ಣೇ ಸಂಪದವು ಲೋಕಕೆ ಹೆಣ್ಣಿಲ್ಲದ ಬಾಳು ಬಾಳಲ್ಲ ಸರ್ವಜ್ಞ' ಎನ್ನುವಂತೆ ಒಂದು ಕುಟುಂಬದ ನಿರ್ವಹಣೆಗೆ ಸ್ತ್ರೀ ಪಾತ್ರ ಅಪಾರ. ಆಕೆ ನಿಜವಾದ ಕುಟುಂಬದ ಆಧಾರ. ತಮ್ಮ ತಾಯಿಯನ್ನು ಕಳೆದುಕೊಂಡು ಮಕ್ಕಳು ಹಾಗೂ ಗಂಡಂದಿರು ಅನಾಥರಾಗಿದ್ದಾರೆ.

ಆದರೆ, ಕೆಲವೊಂದು ಘಟನೆಗಳು ನಮ್ಮ ಕೈ ಮೀರಿ ನಡೆದೇ ಹೋಗುತ್ತವೆ. ಅದಕ್ಕೆ ಸುಮ್ಮನೆ ದೂಷಣೆ, ವಿಶ್ಲೇಷಣೆ, ಸರಿ - ತಪ್ಪುಗಳ ವಿಮರ್ಶೆ ಮಾಡುವುದು ಒಳ್ಳೆಯದಲ್ಲ, ಪ್ರಯೋಜನವೂ ಅಲ್ಲ. ಅವರು ಗೋವಾಕ್ಕೆ ಹೋಗಬಾರದಿತ್ತು, ಬೆಳಗಿನ ಜಾವ ಹೋಗಬಾರದಿತ್ತು, ಬರೀ ಹೆಣ್ಣು ಮಕ್ಕಳೇ ಹೋಗಿದ್ದಾರೆ. ಡ್ರೈವರ್ ಸರಿ ಇರಲಿಲ್ಲ, ಗಾಡಿ ಸರಿ ಇರಲಿಲ್ಲ, ಅಂದು ಕರಿ ನೆರಳಿತ್ತು, ಶಿವಲಿಂಗದ ಮೇಲೆ ಸೂರ್ಯಕಿರಣ ಬೀಳಲಿಲ್ಲ, ಅದಕ್ಕೆ ಈಗಾಯಿತು. ಇಂತಹ ಅವೈಜ್ಞಾನಿಕ ಹಲವಾರು ಕುತರ್ಕಗಳನ್ನು ಮಾಡುತ್ತಾ, ಅವರ ಮನೆಯವರಿಗೆ ಉಪದೇಶ ಮಾಡುವುದು ಸರ್ವತಾ ಸಲ್ಲದು. ಅವರ ಪ್ರವಾಸದ ಬಗ್ಗೆ ಅನಾವಶ್ಯಕ ಚರ್ಚೆ ಮಾಡಲು ನಮಗೆ ನೈತಿಕ ಹಕ್ಕಿಲ್ಲ, ಅಧಿಕಾರವೂ ಇಲ್ಲ. ಇಂತಹ ಸಂದರ್ಭದಲ್ಲಿ ಅವರಿಗೆ ಉಪದೇಶ ಮುಖ್ಯವಲ್ಲ. ಸಾಂತ್ವನ, ಸಹಕಾರ, ಪ್ರೀತಿ, ಕರುಣೆ ಮುಖ್ಯ. ಈಗ ಅವರ ಕುಟುಂಬಗಳ ದುಃಖ ನಿವಾರಿಸೋಣ, ಹೆಚ್ಚಿಸುವುದು ಬೇಡ. ಗುಂಡಪ್ಪನವರು ಹೇಳುವಂತೆ

*ಎಲ್ಲರಿಗಮಾಗಿ ತಾನ್, ಎಲ್ಲರುಂ ತನಗಾಗಿ।*
*ನಿಲ್ಲುವೇಕಾತ್ಮತೆಯ ಬಾಳ್ವೆಯಿಂ ಕಲಿಯಲ್ ॥*
*ಸಲ್ಲುವು ಪಕರಣಗಳು ಮನೆ ರಾಜ್ಯ ಸಂಸಾರ ।*

ವಲ್ಲಗಳೆಯದಿರವನು - ಮಂಕುತಿಮ್ಮ. ನಾವು ಎಲ್ಲರಿಗೋಸ್ಕರ ಬಾಳಬೇಕು. ದಾವಣಗೆರೆ ಒಂದು ಕುಟುಂಬವಿದ್ದಂತೆ. ಕುಟುಂಬದ ಶ್ರೇಯಸ್ಸಿಗಾಗಿ ನಾವು ಬದುಕಲೇ ಬೇಕು.

ಈ ಘಟನೆ ಈಗಾಗಲೇ ನಡೆದು ಹೋಗಿದೆ. ಅದರ ಬಗ್ಗೆಯೇ ಚಿಂತಿಸಿ ಕೊರುತ್ತಾ ಕೊರಗುವುದಲ್ಲ. ಭವಿಷ್ಯದ ಕಡೆ ಹೆಜ್ಜೆ ಹಾಕಲೇ ಬೇಕು.

*ಇಂದು ಮದುವೆಯ ಹಬ್ಬ : ನಾಳೆ ವೈಕುಂಠ ತಿಥಿ।*
*ಇಂದು ಮೃಷ್ಟಾನ್ನ ಸುಖ, ನಾಳೆ ಭಿಕ್ಷಾನ್ನ॥*
*ಇಂದು ಬರಿಯುಪವಾಸ, ನಾಳೆ ಪಾರಣೆ-ಯಿಂತು।*
*ಸಂದಿರುವುದು ಅನ್ನ ಋಣ- ಮಂಕುತಿಮ್ಮ॥*

ಈವತ್ತು ಮದುವೆಯ ಊಟ, ನಾಳೆ ಯಾರೋ ಒಬ್ಬರ ವೈಕುಂಠ ಸಮಾರಾಧನೆಯ ಊಟ. ಒಂದು ಮನಸ್ಸಿಗೆ ಹಿತವಾದದ್ದೂ; ಇನ್ನೊಂದು ಅಹಿತವಾದದ್ದು ಹೀಗೆಯೇ ಸುಖ-ದುಃಖಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಒಂದರ ಹಿಂದೆ ಒಂದು ಬಂದೇ ಬರುತ್ತವೆ. ನಾವು ಒಳ್ಳೆಯದನ್ನು ಸ್ವೀಕರಿಸಲು ಕಾತುರದಿಂದ ಇರುತ್ತೇವೆ. ಅಹಿತವಾದದ್ದನ್ನು ಕುರಿತು ದುಃಖಿಸುತ್ತೇವೆ. ಸುಖದಂತೆ ದುಃಖವನ್ನೂ ಸಹ ಒಪ್ಪಿಕೊಳ್ಳುವುದು ಅನಿವಾರ್ಯ.

**'ಬದುಕು ಜಟಕಾಬಂಡಿ, ವಿಧಿ** (4ನೇ ಪುಟಕ್ಕೆ)

# ನಗರದ ಸಿದ್ದವೀರಪ್ಪ ಬಡಾವಣೆಯಲ್ಲಿ ಇಂದು ಸ್ವಚ್ಛತಾ ಕಾರ್ಯಕ್ರಮ

ಸಿದ್ದವೀರಪ್ಪ ಬಡಾವಣೆ ಕ್ಷೇಮಾಭಿವೃದ್ಧಿ ಸಮಿತಿಯಿಂದ ಇಂದು ಬೆಳಿಗ್ಗೆ 7.30 ಕ್ಕೆ ಸಿದ್ದವೀರಪ್ಪ ಬಡಾವಣೆಯ ಬಿಐಇಟಿ ಕಾಲೇಜ್ ರೋಡ್‌ನಲ್ಲಿರುವ ಕೆನರಾ ಬ್ಯಾಂಕ್ (ಮೋರ್ ಮಹಲ್) ನಲ್ಲಿ 'ಸ್ವಚ್ಛತೆಯೇ ಸ್ಮಾರ್ಟ್ ಸಿಟಿಗೆ ಬುನಾದಿ' ಎನ್ನುವ ಉದ್ದೇಶದಿಂದ ಸ್ವಚ್ಛತಾ ಕಾರ್ಯಕ್ರಮ ನಡೆಯಲಿದೆ. ಮಹಾಪೌರರಾದ ಬಿ.ಜಿ. ಅಜಯ ಕುಮಾರ್, ಪಾಲಿಕೆ ಸದಸ್ಯರಾದ ಶ್ರೀಮತಿ ಗೌರಮ್ಮ ಅವರ ಸಹಯೋಗದೊಂದಿಗೆ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಬಿ. ಚಂದ್ರಶೇಖರ್ ಮನವಿ ಮಾಡಿದ್ದಾರೆ.

# ಲಸಿಕೆ ಪಡೆದಿದ್ದ ಇಬ್ಬರ ಸಾವು

**(1ನೇ ಪುಟದಿಂದ)** ಲಸಿಕೆ ನೀಡಲಾಗಿತ್ತು. ಅವರು ಮರುದಿನ ಸಾವನ್ನಪ್ಪಿದ್ದರು.

ಬಳ್ಳಾರಿಯಲ್ಲಿ ಲಸಿಕೆ ಪಡೆದ ಇನ್ನೊಬ್ಬ ವ್ಯಕ್ತಿ ಸಹ ಹೃದಯ ಶ್ವಾಸಕೋಶದ ಸಮಸ್ಯೆಯಿಂದಾಗಿ ಸಾವನ್ನಪ್ಪಿದ್ದಾರೆ. ಅವರ ಮರಣೋತ್ತರ ಪರೀಕ್ಷೆ ವಿಜಯನಗರ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನಲ್ಲಿ ನಡೆಯಲಿದೆ ಎಂದವರು ಹೇಳಿದ್ದಾರೆ.

ಸಂಡೂರು ಸಾರ್ವಜನಿಕ ಆಸ್ಪತ್ರೆ 'ಡಿ' ಗ್ರೂಪ್ ನೌಕರ ನಾಗರಾಜ್ ಬಾಳಪ್ಪ (43) ಸೋಮವಾರ ಬೆಳಿಗ್ಗೆ ತಾಲ್ಲೂಕಿನ ತೋರಣಗಲ್ಲಿನ ಸಂಜೀವಿನಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾಗಿದ್ದರು.

ಅವರು ಶನಿವಾರ ಕೋವಿಶೀಲ್ಡ್ ಲಸಿಕೆ ಪಡೆದಿದ್ದರು. ಸೋಮವಾರ ಕರ್ತವ್ಯಕ್ಕೆ ಹಾಜರಾಗಿದ್ದಾಗಲೇ ಎದೆನೋವು ಕಾಣಿಸಿಕೊಂಡಿದ್ದರಿಂದ ಕೂಡಲೇ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ತೋರಣಗಲ್ಲಿಗೆ ಕಳಿಸಲಾಗಿತ್ತು.

ದೇಶದಲ್ಲಿ ಇದುವರೆಗೂ 3,81,305 ಜನರಿಗೆ ಲಸಿಕೆ ನೀಡಲಾಗಿದೆ. ಇವರಲ್ಲಿ 580 ಜನರಲ್ಲಿ ಅಡ್ಡ ಪರಿಣಾಮಗಳು ಕಂಡು ಬಂದಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸೋಮವಾರ ಸಂಜೆ 5 ಗಂಟೆಯವರೆಗೆ ದೇಶಾದ್ಯಂತದ 1,48,266 ಜನರಿಗೆ ಲಸಿಕೆ ನೀಡಲಾಗಿದೆ. ಒಟ್ಟಾರೆ ಇದುವರೆಗೂ 3.81 ಲಕ್ಷ ಜನರು ಲಸಿಕೆ ಪಡೆದುಕೊಂಡಿದ್ದಾರೆ.

# ಜಿಲ್ಲೆಯಲ್ಲಿ 752 ಜನರಿಗೆ ಲಸಿಕೆ

**(1ನೇ ಪುಟದಿಂದ)** ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 4, ಚನ್ನಗಿರಿ ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ ತಲಾ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 16 ಜನರು ಸೋಂಕು ಮುಕ್ತರಾಗಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ 106 ಸಕ್ರಿಯ ಪ್ರಕರಣಗಳಿವೆ.

SCIENCE ACADEMY (R.)
(A UNIQUE CENTRE FOR P.U. CLASSES)
# 307/2B, 1st FLOOR, 2ND MAIN, P.J. EXTN, NEAR STADIUM, DAVANGERE – 4
ADMISSION STARTED FOR
II PUC SCIENCE
PCMB TUTIONS
Classes starts from 20th January 2021
For more Details contact: Office: 08192 – 257546,
Mobile: 9980368779, 9448178087.
"We don't have any other branches in Davangere in the name of Academy"

ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ (ಹಿ.ವಿ.) ದಾವಣಗೆರೆ
ಮಿಸ್ ಆಫೀಲು ಸಂಖ್ಯೆ : 27/2019
ವಾದಿ : ಕೆನರಾ ಬ್ಯಾಂಕ್, ಮಂಡಿಪೇಟೆ ಬ್ರಾಂಚ್, ದಾವಣಗೆರೆ
ವಿರುದ್ಧ
ಪ್ರತಿವಾದಿ: 1.ಹೆಚ್.ಇ. ಮುಕುಂದಪ್ಪ ಬಿನ್ ಇರಾಜಪ್ಪ ಉಪನ್ಯಾಸಕರು, ವಯಸ್ಕರು, ಆರ್.ಎಸ್.ಜಿ.ಜಿ. ಪಿ.ಯು. ಕಾಲೇಜು, ದಾವಣಗೆರೆ. ಹಾಲಿ ವಿಳಾಸ: ಸರ್ಕಾರಿ ಕಿರಿಯ ಪಿ.ಯು. ಕಾಲೇಜು ಸವಣೂರು, ಹಾವೇರಿ ತಾಲ್ಲೂಕು, ಜಿಲ್ಲೆ
2. ಕೆ. ವೀರಭದ್ರಪ್ಪ ಬಿನ್ ಕೆ.ಚನ್ನಬಸಪ್ಪ
ಉಪನ್ಯಾಸಕರು, ವಯಸ್ಕರು, ಆರ್.ಎಸ್.ಜಿ.ಜಿ. ಪಿ.ಯು. ಕಾಲೇಜು, ದಾವಣಗೆರೆ.
ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿಯಲ್ಲಿ ಪ್ರತಿವಾದಿಯರಿಗೆ ನೀಡಲಾದ ನೋಟಿಸ್
ಈ ಮೇಲ್ಕಂಡ ಕೇಸಿನಲ್ಲಿ ವಾದಿ, ಪ್ರತಿವಾದಿಯ ವಿರುದ್ಧ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಯಲ್ಲಿ 1 ಮತ್ತು 2ನೇ ಪ್ರತಿವಾದಿಯಾದ ನಿಮಗೆ ನ್ಯಾಯಾಲಯದಿಂದ ಹಾಗೂ ನೋಂದಾಯಿತ ಅಂಚೆ ಮೂಲಕ ನೋಟಿಸ್ ಕಳಿಸಿದಾಗ್ಯೂ ಸದರಿ ನೋಟಿಸ್ ಜಾರಿಯಾಗಿರುವುದಿಲ್ಲ. ಆದ್ದರಿಂದ ಈ ಮೇಲ್ಕಂಡ 1 ಮತ್ತು 2ನೇ ಪ್ರತಿವಾದಿಯಾದ ನಿಮಗೆ ಈ ಮೂಲಕ ತಿಳಿಯ ಪಡಿಸುವದೇನೆಂದರೆ ತಾವು ದಿನಾಂಕ 1.3. 21 ರಂದು ಬೆಳಿಗ್ಗೆ 11.00 ಗಂಟೆಗೆ ನ್ಯಾಯಲಯಾಕ್ಕೆ ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು, ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯಾವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ.
ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 15.1.2021 ರಂದು ಕೊಡಲ್ಪಟ್ಟಿದೆ.
ವಾದಿ ಪರ ವಕೀಲರು
ದಿನಾಂಕ:
ನ್ಯಾಯಾಲಯದ ಅಪ್ಪಣೆ ಮೇರೆಗೆ
(ಶಿರಸ್ತೇದಾರರು)
ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ (ಹಿ.ವಿ.) ಮತ್ತು ಸಿ.ಜೆ.ಎಂ, ದಾವಣಗೆರೆ.

# ವಾಹನಗಳು ರಸ್ತೆಗಿಳಿಯುವ ಮುನ್ನ ಪೂರ್ವಸಿದ್ಧತೆ ಬಹುಮುಖ್ಯ

ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತಗಳು ಹೆಚ್ಚಾಗಿ ಸಾವು-ನೋವು ವಿಪರೀತವಾಗಿವೆ. ಈ ಸಂಬಂಧ ನಾನು ನನ್ನದೇ ಆದ ಕೆಲ ಅನುಭವಗಳನ್ನು ಹೇಳಿಕೊಳ್ಳಬೇಕೆನಿಸಿದೆ.

ನಾನು 1959 ರಲ್ಲಿ ಇಂಗ್ಲೆಂಡಿಗೆ ಹೋಗುವ ತಯಾರಿ ನಡೆಸಿದ ಭಾಗವಾಗಿ ಬಾಂಬೆಯಲ್ಲಿ ವಾಹನ ಚಾಲನೆಯ ತರಬೇತಿ ಪಡೆದು, ಚಾಲನಾ ಪರವಾನಿಗೆ ಪಡೆದೆನು. ಇಂಗ್ಲೆಂಡಿಗೆ ಹೋದ ಬಳಿಕಕಾರ್‌ಖರೀದಿಸಿ,ಈಪರವಾನಿಗೆಯಿಂದಲೇ ಸುಮಾರು ಎರಡು ವರ್ಷ ವಾಹನ ಚಾಲನೆ ಮಾಡಿದೆ. ಬಳಿಕ ಪರವಾನಿಗೆ ಅವಧಿ ಮುಗಿದಿದ್ದರಿಂದ ಅಲ್ಲಿನ ವಾಹನ ಚಾಲನಾ ಪರವಾನಿಗೆ ಪಡೆಯುವುದು ಅವಶ್ಯವಾಗಿತ್ತು.

ಅದಕ್ಕಾಗಿ ಪುನಃ ಲಂಡನ್ನಿನಲ್ಲಿ ತರಬೇತಿ ಪಡೆದು. ಪರೀಕ್ಷೆ ತೆಗೆದುಕೊಂಡೆ. ಆದರೆ ಇದು ನನಗೆ ಸುಲಭವಾಗಿ ಸಿಗಲಿಲ್ಲ. ನನ್ನನ್ನು ಮೂರು ಬಾರಿ ಫೇಲ್ ಮಾಡಿ, ಕೊನೆಗೆ ನಾಲ್ಕನೇ ಬಾರಿಗೆ ಪಾಸು ಮಾಡಿ ಪರವಾನಿಗೆ ನೀಡಿದರು.

ಇದರರ್ಥ ಇಷ್ಟೇ....ವಾಹನ ಚಾಲನೆಯನ್ನು ಲಘುವಾಗಿ ತೆಗೆದುಕೊಳ್ಳದೇ ಅದನ್ನು ಒಂದು ಗಂಭೀರ ವಿಷಯವನ್ನಾಗಿ ಪರಿಗಣಿಸಬೇಕು ಅನ್ನುವುದಾಗಿದೆ. ನನ್ನ ಪ್ರಕಾರ ನಾವು ಪ್ರತಿ ಸಾರಿ



ನಮ್ಮ ವಾಹನದೊಂದಿಗೆ ರಸ್ತೆಗಿಳಿದಾಗ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ರಸ್ತೆಗಳ ಅನುಭವ, ಅವುಗಳ ತಿರುವುಗಳು, ರಸ್ತೆ ಚಾಲನೆಯ ನಿಯಮಗಳು ಇತ್ಯಾದಿ ಅರಿತಿರಬೇಕು.

ಇನ್ನು ಪ್ರವಾಸದ ಪೂರ್ವ ಸಿದ್ಧತೆಯಲ್ಲಿ ಬಾಡಿಗೆ ವಾಹನದಲ್ಲಿ ಪ್ರಯಾಣ ಮಾಡುವಾಗ ಚಾಲಕನ ಪರಿಚಯ, ಅವರ ವಾಹನ ಪರವಾನಿಗೆ, ಚಾಲನಾ ಅನುಭವದ ಕುರಿತು ತಿಳಿದುಕೊಂಡಿರಬೇಕು.

ಪ್ರಯಾಣದ ವೇಳೆ ನಿರ್ಧರಿಸುವುದು ಬಹು ಮುಖ್ಯ. ರಾತ್ರಿ ಪ್ರಯಾಣವಾದರೆ ಚಾಲಕನ ನಿದ್ರೆಯ ಕುರಿತು ನಾವು ವಿಚಾರಿಸಬೇಕು. ಆತನ ನಿದ್ದೆಗೆ ಅವಕಾಶ ನೀಡಬೇಕು. ನಂತರ ಪ್ರಯಾಣ ಮಾಡಬೇಕು.

ಚಾಲಕ ಪ್ರಯಾಣ ಮಾಡುತ್ತಿದ್ದರೆ ಆತನ ಪಕ್ಕ ಅನುಭವಸ್ಥರೊಬ್ಬರು ಕುಳಿತು ಆತನ ಚಾಲನೆ ಬಗ್ಗೆ ಗಮನಿಸುತ್ತಿರಬೇಕು. ಅಂದರೆ ಪ್ರಯಾಣಿಕರಲ್ಲಿ ಒಬ್ಬರು ಪೂರ್ಣ ಎಚ್ಚರದಿಂದ ಇರಬೇಕು. ರಸ್ತೆ ಸುರಕ್ಷತೆ ಬಗ್ಗೆ ಸದಾ ಗಮನವಿಟ್ಟಿರಬೇಕು. ಇತರೆ ವಾಹನಗಳ ಬಗ್ಗೆಯೂ ಗಮ ನವಿರಬೇಕು. ವಾಹನದ ವೇಗದ ಬಗ್ಗೆ ನಿಗಾ ವಹಿಸಬೇಕು. 'ಸ್ಪೀಡ್ ಥ್ರಿಲ್ಸ್ ಬಟ್ ಕಿಲ್ಸ್', 'ಇಟ್ ಈಸ್ ಬೆಟರ್ ಟು ಬಿ ಲೇಟ್ ದ್ಯಾನ್ ನೆವರ್' ಎಂಬುದನ್ನು ಅರಿಯಬೇಕು.

ನಮ್ಮಲ್ಲಿ ಒಂದು ತಪ್ಪು ತಿಳುವಳಿಕೆ ಮೊದಲಿನಿಂದ ಬಂದಿದೆ. ವಾಹನ ಚಾಲಕನನ್ನು, ರಸ್ತೆ ಸ್ವಚ್ಛ ಮಾಡುವವರನ್ನು, ಚರಂಡಿ ಸ್ವಚ್ಛ ಮಾಡುವವರನ್ನು ಕೀಳಾಗಿ ನೋಡುವುದಾಗಿದೆ. ಇದು ತಪ್ಪು ಎಂಬುದು ನನ್ನ ಸ್ವಂತ ಅಭಿಪ್ರಾಯ. ಜನರ ಭಾವನೆ ಬದಲಾಗಬೇಕಿದೆ. ಸಮಾಜಕ್ಕೆ, ಜೀವನಕ್ಕೆ ಎಲ್ಲರ ಅವಶ್ಯಕತೆ ಇದೆ ಎಂಬುದನ್ನು ಎಲ್ಲರೂ ಅರಿಯಬೇಕು. ಪ್ರಯಾಣದ ಸಂದರ್ಭದಲ್ಲಿ ಅವರೊಂದಿಗಿನ ಉತ್ತಮ ಬಾಂಧವ್ಯ ಬಹು ಮುಖ್ಯವಾಗಲಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

**- ಡಾ. ಸಿ.ಹ. ಸೊರಟೂರ,** ನಿವೃತ್ತ ದಂತ ವೈದ್ಯರು

# ವಿದ್ಯುತ್ ಚಾಲಿತ ಬಸ್‌ಗಳಿಗೆ ಚಾಲನೆ

**(1ನೇ ಪುಟದಿಂದ)** ಸವದಿ ಹೇಳಿದ್ದಾರೆ.

**ಇಚ್ಛಾಶಕ್ತಿ ಇಲ್ಲದೇ ನಷ್ಟ :** 2014ರ ನಂತರ ಡೀಸೆಲ್‌ನಿಂದ ಹಿಡಿದು ನೌಕರರ ವೇತನದವರೆಗೆ ಎಲ್ಲ ದರಗಳು ಹೆಚ್ಚಾಗಿವೆ. ಆದರೆ, ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದಾಗಿ ಬಸ್ ಪ್ರಯಾಣ ದರ ಹೆಚ್ಚಾಗಿಲ್ಲ. ಇದರಿಂದಾಗಿ ಸಾರಿಗೆ ನಿಗಮಗಳು ನಷ್ಟಕ್ಕೆ ಗುರಿಯಾಗಿವೆ. ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಂಡು ನಿಗಮಗಳನ್ನು ಲಾಭಕ್ಕೆ ತರಲಾಗುವುದು ಎಂದು ಸವದಿ ಹೇಳಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮಾತನಾಡಿ, ಪುನರ್ ನಿರ್ಮಾಣವಾಗಲಿರುವ ನಿಲ್ದಾಣ ರಾಜ್ಯಕ್ಕೇ ಮಾದರಿ ಆಗಬೇಕು. ಎರಡು ವರ್ಷಗಳಲ್ಲೇ ನಿರ್ಮಾಣ ಪೂರ್ಣವಾಗಲು ಅಧಿಕಾರಿಗಳು ಮುತುವರ್ಜಿ ವಹಿಸಬೇಕು ಎಂದು ತಿಳಿಸಿದರು.

ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ವಾಹನ ಚಾಲಕರು ಮಾನಸಿಕ ಒತ್ತಡದಿಂದ ಮುಕ್ತವಾಗಿ ಬಸ್ ಚಲಾಯಿಸಬೇಕು. ಜನರು ನಿಮ್ಮನ್ನು ನಂಬಿ ವಾಹನವನ್ನು ಏರುತ್ತಾರೆ. ಇತ್ತೀಚೆಗೆ ಚಾಲಕನೊಬ್ಬನ ಅಜಾಗರೂಕತೆಯಿಂದ ನಗರದ 11 ಮಹಿಳೆಯರು ಸಾವನ್ನಪ್ಪಿದ್ದರು. ಇದು ಚಾಲಕರು ಜಾಗೃತಿ ವಹಿಸಬೇಕಾಗಿರುವುದು ಎಷ್ಟು ಮುಖ್ಯ ಎಂಬುದನ್ನು ತೋರಿಸುತ್ತದೆ ಎಂದು ಹೇಳಿದರು.

ಸಾರಿಗೆ ನಿಗಮದ ಅಧ್ಯಕ್ಷ ಎಂ. ಚಂದ್ರಪ್ಪ ಮಾತನಾಡಿ, ಸಾರಿಗೆ ನಿಗಮ ಈಗ ಶಕ್ತಿ ಇಲ್ಲದ ಸ್ಥಿತಿಯಲ್ಲಿದೆ. ಸ್ಮಾರ್ಟ್ ಸಿಟಿ ಮೂಲಕ ಸಾರಿಗೆ ಸೌಲಭ್ಯ ಕಲ್ಪಿಸಲು ಸಂಸದ ಸಿದ್ದೇಶ್ವರ ಇನ್ನಷ್ಟು ಶ್ರಮಿಸಬೇಕು ಎಂದು ಕೇಳಿದರು.

ಶಾಸಕ ಎಸ್.ಎ. ರವೀಂದ್ರನಾಥ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಲಿಡ್ಕರ್ ಅಧ್ಯಕ್ಷ ಹಾಗೂ ಶಾಸಕ ಪ್ರೊ.ಎನ್. ಲಿಂಗಣ್ಣ, ಜಿ.ಪಂ. ಅಧ್ಯಕ್ಷೆ ಕೆ.ವಿ. ಶಾಂತಕುಮಾರಿ, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಸಾರಿಗೆ ನಿಗಮದ ಉಪಾಧ್ಯಕ್ಷ ಎಸ್.ಎನ್. ಈಶ್ವರಪ್ಪ, ಜಿ.ಪಂ. ಉಪಾಧ್ಯಕ್ಷೆ ಸಾಕಮ್ಮ, ಪಾಲಿಕೆ ಉಪ ಮೇಯರ್ ಸೌಮ್ಯ ನರೇಂದ್ರ ಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪದ್ಮಾ ಬಸವಂತಪ್ಪ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಎಎಸ್‌ಪಿ ಎಂ.ರಾಜೀವ್, ಪಾಲಿಕೆ ಸದಸ್ಯ ಎಸ್. ಟಿ. ವೀರೇಶ್ ಮತ್ತಿತರರು ಉಪಸ್ಥಿತರಿದ್ದರು.

## ಕೆಲಸ ಮುಗಿಸಿದರೆ ತೊಲ ಬಂಗಾರ ! : ಶಾಸಕ

**(1ನೇ ಪುಟದಿಂದ)** ರಾತ್ರಿ ಸ್ವಲ್ಪ ಕುಡುದು ಪಡದು ಜ್ವಾಲಾಗೆ ಹೋಗಂತೋರು ಬಿದ್ದರು ಎಂದರೆ ಕೈ - ಕಾಲು ಮುರುಕಂತಾರೆ' ಎಂದೂ ಹೇಳಿದರು. 'ಇದನ್ನ ಮಾತ್ರ (ಬಸ್ ನಿಲ್ದಾಣದ ಕಾಮಗಾರಿ) ಮಲ್ಲಾಪುರ ಹಂಗೆ ಮಾಡಿಸ್ಬೇಡಿ. ಇರ ಬಸ್ ಸ್ಟ್ಯಾಂಡ್ ಬೇಕಾದ್ರೆ ಹೀಗೇ ಇರಲಿ. ಇಲ್ಲ ಕಿತ್ ಹಾಕಿದ್ರೆ ತಿರುಗಿ ಮಾರನೇ ದಿನದಿಂದ ಹಗಲೂ ರಾತ್ರಿ ಎನ್ನದೆ ಕೆಲಸ ಮಾಡಬೇಕು' ಎಂದು ರವೀಂದ್ರನಾಥ್ ಅವರು ವೇದಿಕೆಯ ಮೇಲಿದ್ದ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಅವರಿಗೆ ಸೂಚನೆ ನೀಡಿದರು.

# ದುಃಖಿತರ ದುಃಖ ಹೆಚ್ಚಿಸದೆ ನಿವಾರಿಸೋಣ

**(3ನೇ ಪುಟದಿಂದ)** ***ಅದರ ಸಾಹೇಬ***
***ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು***
***ಮದುವೆಗೋ, ಮಸಣಕೋ ಹೋಗೆಂದ***
***ಕಡೆಗೋಡು***
***ಪದಘುಷಿಯೇ ನೆಲವಿಹುದು ಮಂಕುತಿಮ್ಮ'***

ನಮ್ಮ ಕೈಲಿ ಏನೂ ಇಲ್ಲ. ಅನಿರೀಕ್ಷಿತ ದುರ್ಘಟನೆಗಳು ಆಗುತ್ತಿರುತ್ತವೆ. ಕೊರೊನಾ ಬರಬೇಕೆಂದು ನಾವ್ಯಾರು ಬಯಸಿರಲಿಲ್ಲ. ಆದರೆ, 1 ವರ್ಷಗಳ ಕಾಲ ಕೊರೊನಾದ ಭಯದಲ್ಲೇ ಮುಳುಗಿದ್ದೆವು. ಗೋವಾ ಪ್ರವಾಸ ಮಾಡಲು ಸಂತೋಷದಿಂದ ತೆರಳುತ್ತಿದ್ದ ಇವರಿಗೆ ಕೆಲವೇ ಕ್ಷಣಗಳಲ್ಲಿ ತಮ್ಮ ಅಮೂಲ್ಯ ಪ್ರಾಣಗಳನ್ನು ಕಳೆದುಕೊಳ್ಳುತ್ತೇವೆ ಎನ್ನುವ ಕಲ್ಪನೆಯೂ ಸಹ ಇರಲಿಲ್ಲ.

***ತರಚುಗಾಯವ ಕೆರೆದು ಹುಣ್ಣಾಗಿಪುದು ಕಪಿ।***
***ಕೊರತೆಯೊಂದನು ನೀನು ನೆನೆನೆನೆದು ಕೆರಳಿ॥***
***ಧರೆಯೆಲ್ಲವನು ಶಪಿಸಿ, ಮನದಿ ನರಕವ ನಿಲಿಸಿ।***
***ನರಳುವುದು ಬದುಕೇನೊ? - ಮಂಕುತಿಮ್ಮ॥***

ನಿಜವಾಗಲು ಈ ಘಟನೆ ದೊಡ್ಡ ಗಾಯವೇ ಸರಿ. ಆದರೆ, ಇದನ್ನು ಪದೇ ಪದೇ ನೆನೆದು ಮನಸ್ಸಿಗೆ ಘಾಸಿ ಕೊಳ್ಳಿಸಿಕೊಳ್ಳುವುದರಲ್ಲಿ ಪ್ರಯೋಜನವಿಲ್ಲ. ಆದಷ್ಟು ಬೇಗ ಈ ದುಃಖದಿಂದ ಸ್ವಲ್ಪ ಸ್ವಲ್ಪವೇ ಹೊರಬಂದು ಭವಿಷ್ಯದ ಜೀವನವನ್ನು ನಿರ್ಮಾಣ ಮಾಡಿಕೊಳ್ಳಬೇ ಕಾಗಿದೆ. ಅದರ ಬಗ್ಗೆಯೇ ನೆನೆದು ಕೊರಗುತ್ತಿದ್ದರೆ ತಮ್ಮ ಮಕ್ಕಳ ಭವಿಷ್ಯವನ್ನು ನೋಡಬೇಕಲ್ಲವೇ. ಈ ದುರ್ಮರಣಕ್ಕೀಡಾದ ಎಲ್ಲಾ ಕುಟುಂಬಗಳಿಗೆ ಅವರ ಅಗಲಿಕೆಯ ನೋವು ಭರಿಸುವಂತೆ ಪ್ರಕೃತಿ ಮಾತೆ ಶಕ್ತಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

ಇಂತಹ ದುರ್ಘಟನೆಗಳಿಗೆ ಮುಖ್ಯ ಕಾರಣ ರಸ್ತೆಗಳ ಸರಿಯಾದ ನಿರ್ಮಾಣವಾಗದಿರುವುದು. ದಯವಿಟ್ಟು ಸರ್ಕಾರಗಳು ಇದರ ಬಗ್ಗೆ ಗಮನ ಹರಿಸಬೇಕು. ಹಿಂದೆ ಇದೇ ಜಾಗದಲ್ಲಿ ಎಷ್ಟೋ ಅಪಘಾತಗಳಾಗಿವೆ. ಆದರೂ ಕ್ರಮಕೈಗೊಳ್ಳದಿರುವುದು ಶೋಚನೀಯ. ಜನರೂ ಸಹ ಎಚ್ಚೆತ್ತುಕೊಳ್ಳಬೇಕು ಆದಷ್ಟು ದೂರದ ಪ್ರಯಾಣಕ್ಕೆ ಸಾರ್ವಜನಿಕ ವಾಹನಗಳನ್ನು ಬಳಸಬೇಕು. ಬೆಳಿಗ್ಗೆ 5 ಗಂಟೆಯ ನಂತರ ರಾತ್ರಿ 10 ಗಂಟೆಯ ಒಳಗೆ ಪ್ರಯಾಣಿಸುವುದು ಸುರಕ್ಷಿತ. ಭಾರತ ದೇಶದಲ್ಲಿ ಅತೀ ಹೆಚ್ಚು ಸಾವುಗಳಾಗುವುದು ಹೃದಯಾಘಾತ, ಕ್ಯಾನ್ಸರ್ ಮತ್ತು ಅಪಘಾತಗಳಿಂದ. ಅಮೇರಿಕಾದಂತಹ ಅಭಿವೃದ್ಧಿ ರಾಷ್ಟ್ರಗಳಲ್ಲಿ ಅಪಘಾತಗಳಾಗುವುದು ಕಡಿಮೆ. ಏಕೆಂದರೆ ಅಲ್ಲಿನ ರಸ್ತೆಗಳು ಸುವ್ಯವಸ್ಥಿತವಾಗಿರುತ್ತವೆ. ಆದರೆ, ನಮ್ಮ ಭಾರತ ದೇಶದ ರಸ್ತೆಗಳ ಸ್ಥಿತಿ ಹೇಳತೀರದು. ಜೊತೆಗೆ ಸವಾರರಲ್ಲಿ ಚಾಲನಾ ಪ್ರಜ್ಞೆ ಹಾಗೂ ಕಾನೂನುಗಳ ಬಿಗಿ ಹಿಡಿತ ತುಂಬಾ ಸುವ್ಯವಸ್ಥಿತವಾಗಿದೆ. ಉದಾ : ಯುರೋಪ್‌ನಲ್ಲಿ ರಾತ್ರಿ 8 ಗಂಟೆಯ ನಂತರ ಪ್ರಯಾಣಿಸುವಂತಿಲ್ಲ.

ದಾವಣಗೆರೆ ಇತಿಹಾಸದಲ್ಲಿ ಬಹಳ ವರ್ಷಗಳ ಹಿಂದೆ ಭಾನುವಳ್ಳಿಯಲ್ಲಿ ಹೊಳೆಗೆ ಬಸ್ಸು ಬಿದ್ದು, ಮತ್ತು ಚಿತ್ರದುರ್ಗ ಹಾಗೂ ಉಚ್ಚಂಗಿದುರ್ಗದಲ್ಲಿ ಹೊಂಡಕ್ಕೆ ಬಸ್ಸು ಬಿದ್ದು ಬಹಳಷ್ಟು ಜನ ದುರ್ಮರಣ ಹೊಂದಿದ್ದರು. ಈಗ ನೇರ ಡಿಕ್ಕಿಯಲ್ಲಿ ಶುಕ್ರವಾರ ನಡೆದ ಘಟನೆಯಲ್ಲಿ 14 ಜನ ದುರ್ಮರಣ ಹೊಂದಿರುವುದು ದುಃಖಕರ.

ಅಪಘಾತದಲ್ಲಿ ಸಾವಿಗೀಡಾದವರಲ್ಲಿ ಒಬ್ಬರಾದ ಶ್ರೀಮತಿ ಪ್ರೀತಿ ರವಿಕುಮಾರ್‌ರವರು ಕರುಣಾ ಟ್ರಸ್ಟಿನ ನಿರ್ದೇಶಕರಲ್ಲಿ ಒಬ್ಬರಾಗಿದ್ದು, ಟ್ರಸ್ಟಿನ ಸಮಾಜ ಸೇವಾ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಜೊತೆಗೆ ದಾನವಿತ್ತು ಸಹಕರಿಸುತ್ತಿದ್ದರು. ಹಾಗೆಯೇ ಡಾ. ವೀಣಾ ಮತ್ತಿಹಳ್ಳಿ ಪ್ರಕಾಶ್‌ರವರೂ ಸಹ ದಾನವನ್ನು ನೀಡುವುದರ ಜೊತೆಗೆ ಟ್ರಸ್ಟ್ ಶಾಲಾ-ಕಾಲೇಜುಗಳಲ್ಲಿ ನಡೆಸುತ್ತಿದ್ದ ಹದಿಹರೆಯದ ಹೆಣ್ಣುಮಕ್ಕಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿ ಸತತವಾಗಿ ಭಾಗವಹಿಸುತ್ತಾ, ಸದಾ ಸಮಾಜ ಸೇವೆಗೆ ಮುಂದಾಗುತ್ತಿದ್ದರು. ಇಬ್ಬರೂ ಹಸನ್ಮುಖಿಗಳು, ಸದ್‌ವ್ಯಕ್ತಿಗಳು, ಸಹೃದಯಿಗಳು, ಸಹಕಾರ ಮನೋಭಾವದವ ರಾಗಿದ್ದರು. ಇವರಿಬ್ಬರಿಗೂ ಕರುಣಾ ಟ್ರಸ್ಟ್ ವಿಶೇಷವಾಗಿ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

ಒಟ್ಟಿನಲ್ಲಿ ಆ ಕುಟುಂಬಗಳು, ಅವರ ಸಂಬಂಧಿಕರು ಹಾಗೂ ನಗರ ಈ ದುರ್ಘಟನೆಯಿಂದ ಬೇಗ ಚೇತರಿಸಿ ಕೊಂಡು ಸಹಜ ಸ್ಥಿತಿಗೆ ಮರಳಲಿ. ಇನ್ನು ಮುಂದಾದರೂ ಇಂತಹ ದುರ್ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸುವುದು ನಮ್ಮೆಲ್ಲರ ಕರ್ತವ್ಯ.

## ದಿನದ ಚುಟುಕು

ಭಾನರಾಜ ರವಿತೇಜ ಬಲು ಧೀರ
ಎಳೆದೆಳೆದು ಹೀರಿದ ಭುವಿಯ ನೀರ
ಆದರೇನು ತೀರಲಿಲ್ಲ ಅವನ ದಾಹ!
ಬರಿದಾಗಲಿಲ್ಲ ಕಡಲ ನೀರು ಆಹಾ!

- ವೀಕೆಎಂ.

# ಯಲ್ಲಮ್ಮ ನಗರದಲ್ಲಿ ಸಿಮೆಂಟ್ ರಸ್ತೆ ಕಾಮಗಾರಿಗೆ ಚಾಲನೆ



ದಾವಣಗೆರೆ, ಜ.18- ನಗರ ಪಾಲಿಕೆಯ 22ನೇ ವಾರ್ಡಿನ ಯಲ್ಲಮ್ಮ ನಗರದ 3ನೇ ಮುಖ್ಯ ರಸ್ತೆ, 13ನೇ ತಿರುವಿನಲ್ಲಿ ನಗರ ಪಾಲಿಕೆಯ 15ನೇ ಹಣಕಾಸಿನ ಯೋಜನೆಯಡಿಯಲ್ಲಿ ಸುಮಾರು 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿರುವ ಸಿಮೆಂಟ್ ರಸ್ತೆ ಮತ್ತು ಒಳಚರಂಡಿ ಕಾಮಗಾರಿಗಳಿಗೆ ಈ ವಾರ್ಡಿನ ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್ ಅವರು ಗುದ್ದಲಿ ಪೂಜೆ ನೆರವೇರಿಸುವುದರ ಮೂಲಕ ಚಾಲನೆ ನೀಡಿದರು.

ಪಾಲಿಕೆಯ ಅಭಿಯಂತರರಾದ ಶೃತಿ ಮತ್ತು ಜಯಲಕ್ಷ್ಮಿ, ವಾರ್ಡಿನ ಪ್ರಮುಖರುಗಳಾದ ಗಣೇಶಪ್ಪ, ಚಲುವಪ್ಪ, ಲಕ್ಷ್ಮಣರಾವ್ ಸಾಳಂಕಿ, ನಾಗರಾಜ ಗೌಡ, ತರಕಾರಿ ಮೂರ್ತಿ, ರುದ್ರಸ್ವಾಮಿ, ಶ್ರೀನಿವಾಸ್, ಮೀಸೆ ರಾಮಣ್ಣ, ಅಣ್ಣೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜನಜಾಗೃತಿಗಾಗಿ ವಾಲ್ಮೀಕಿ ಜಾತ್ರೆ

**(1ನೇ ಪುಟದಿಂದ)** ಶ್ರೀಗಳು ಆಶಯ ವ್ಯಕ್ತ ಪಡಿಸಿದರು.

**ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಿ:** ಸರ್ಕಾರದಿಂದ ಎಸ್ಟಿ ನಿಗಮದಡಿ ದೊರೆಯುವ ಗಂಗಾಕಲ್ಯಾಣ ಸೇರಿದಂತೆ ಇತರೆ ಸೌಲಭ್ಯಗಳನ್ನು ಸಮುದಾಯದ ಅರ್ಹ ಬಡ ಫಲಾನುಭವಿಗಳಿಗೆ ಪಕ್ಷಾತೀತವಾಗಿ ಕಲ್ಪಿಸಿಕೊಡಬೇಕು. ಸಮುದಾಯದ ಬಡ ಜನರು ಆರ್ಥಿಕ ಅಭಿವೃದ್ಧಿ ಹೊಂದಲು ಕೈ ಜೋಡಿಸಿ ಎಂದು ಶ್ರೀ ವಾಲ್ಮೀಕಿ ಅಭಿವೃದ್ದಿ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಎಸ್.ವಿ. ರಾಮಚಂದ್ರ ಅವರಿಗೆ ಶ್ರೀಗಳು ಸಲಹೆ ನೀಡಿದರು.

ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ವಾಲ್ಮೀಕಿ ಜನಾಂಗದ ಪ್ರತಿನಿಧಿಯಾಗಿರುವ ನಾನು ಜನಾಂಗದ ಸರ್ವತೋಮುಖ ಅಭಿವೃದ್ದಿಗೆ ಸದಾ ಶ್ರಮಿಸುವೆ. ಮುಖ್ಯಮಂತ್ರಿ ಯಡಿಯೂರಪ್ಪನವರು ಶೇ. 7.5 ಮೀಸಲಾತಿ ಒದಗಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಮೀಸಲಾತಿಗಾಗಿ ನಮ್ಮ ಶ್ರೀಗಳು ಕೈಗೊಂಡ ಪಾದಯಾತ್ರೆ ಸರಕಾರದ ಗಮನ ಸೆಳೆದಿದೆ.ಮೀಸಲಾತಿಗಾಗಿ ಸಮಾಜದ 17 ಜನ ಶಾಸಕರು, ಶ್ರೀಗಳು ತಿಳಿಸಿದರೆ ರಾಜೀನಾಮೆ ನೀಡಲೂ ಸಿದ್ದರಾಗಿದ್ದೇವೆ ಎಂದರು.

ಇದೇ ವೇಳೆ ಜಿ.ಪಂ ಕ್ಷೇತ್ರಕ್ಕೆ ತಲಾ ಒಬ್ಬರಂತೆ ಅಣಬೂರು ವಕೀಲ ಜಿ.ಎಸ್. ಲಕ್ಷ್ಮಣ, ದೊಣ್ಣೆಹಳ್ಳಿ ಬಿ. ರವಿಕುಮಾರ್, ಬಿಳಿಚೋಡು ಮಹೇಶ್, ಸೊಕ್ಕೆ ಆನಂದಪ್ಪ ಹಾಗೂ ಪಟ್ಟಣಕ್ಕೆ ಲೋಕೇಶ್, ಮಹಿಳಾ ಪ್ರತಿನಿಧಿಯಾಗಿ ಜಿ.ಪಂ. ಸದಸ್ಯೆ ಸವಿತಾ ಅವರನ್ನು ವಾಲ್ಮೀಕಿ ಸೇವಾ ಸಮಿತಿಗೆ 5 ಜನರನ್ನು ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿ.ಪಂ. ಸದಸ್ಯೆ ಸವಿತಾ ಕಲ್ಲೇಶ್, ಪ.ಪಂ. ಅಧ್ಯಕ್ಷ ಆರ್. ತಿಪ್ಪೇಸ್ವಾಮಿ ನಾಯಕ ಸಮಾಜದ ಕಾರ್ಯದರ್ಶಿ ಸೂರಲಿಂಗಪ್ಪ, ಮುಖಂಡರಾದ ವೀರೇಂದ್ರ ಸಿಂಹ ,ಪಿ.ಎಚ್.ಓ ಬಣ್ಣ, ಬಿ.ದೇವೇಂದ್ರಪ್ಪ, ನಿವೃತ್ತ ಶಿಕ್ಷಕ ಪಾಲಯ್ಯ, ಬಿಸ್ತುವಳ್ಳಿ ಬಾಬು, ಲೋಕೇಶ್, ಪ್ರಭು , ಮಾಗಡಿ ಮಂಜಣ್ಣ, ಕೃಷ್ಣಮೂರ್ತಿ, ಶ್ರೀನಿವಾಸ್, ಓಬಳೇಶ್ ಬಿದರಕೆರೆ ರವಿಕುಮಾರ್, ನಿಜಲಿಂಗಪ್ಪ, ಶಿವಣ್ಣ, ನಾಗರಾಜ್, ಶಿವಣ್ಣ ಮುಂತಾದವರು ಭಾಗವಹಿಸಿದ್ದರು.

**ಸೈಟ್‌ಗಳು ಮಾರಾಟಕ್ಕಿವೆ**
40x60 East, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x32 South 30x32 Corner, 30x50 west
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಸೈಟ್‌ಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆ 34x40 (ಪೂರ್ವ), 54x40 (ಪೂರ್ವ ಕಾರ್ನರ್) 30x50 (ಪಶ್ಚಿಮ) , ಜೆ.ಹೆಚ್. ಪಟೇಲ್ ಬಡಾವಣೆ 40x60 (ಉತ್ತರ) ಮೇಲೆ ಎರಡು ಮನೆ.
ಸೈಟ್‌ಗಳ ಕೊಡುವುದಕ್ಕೆ ಮತ್ತು ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ
ಸುರೇಶ್: 95911 60520
ಐಗೂರು ವಿಜಯ್ ಕುಮಾರ್
99457 02495

**ಸೈಟ್‌ಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆಯಲ್ಲಿ 30x40 ಪೂರ್ವ, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ, ಬನಶ್ರೀ ಬಡಾವಣೆಯಲ್ಲಿ 30x40 ದಕ್ಷಿಣ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
90601 72745

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆ ಸ್ಟಾಫ್‌ಗಳು ಬೇಕಾಗಿದ್ದಾರೆ. ವಯಸ್ಸು : 18 ರಿಂದ 25, ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
ಸಪ್ಲೈಯರ್, ಕ್ಲೀನರ್ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು 18 ರಿಂದ 35 ಹುಡುಗ, ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ : ಆಂಜನೇಯ ಬಡಾವಣೆ, ನೇತ್ರಾವತಿ ಹಾಸ್ಟೆಲ್ ರೋಡ್
ಮೊ.: 93804 69079

**ಸೈಟು ಮಾರಾಟಕ್ಕೆ**
ಶಾಮನೂರು ವಾಜಪೇಯಿ ಲೇಔಟ್‌ನಲ್ಲಿ
30x40 ಪಶ್ಚಿಮ, 30x40 ಪಶ್ಚಿಮ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಮನೆ ಮಾರಾಟಕ್ಕೆ**
ದಾವಣಗೆರೆ ಪಿಸಾಳೆ ಕಾಂಪೌಂಡ್, 2ನೇ ಕ್ರಾಸ್ (#792/2) ನಲ್ಲಿ 17x20ರ ಅಳತೆಯ 2 ಫ್ಲೋರ್ 1 BHK ಮನೆ ಮಾರಾಟಕ್ಕೆ ಇದೆ.
ಸಂಪರ್ಕಿಸಿ:
99724 58996

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ
ಎಸ್.ಎಸ್ 'ಬಿ' ಬ್ಲಾಕ್‌ನಲ್ಲಿ 35x46 North East corner ಮನೆ 3 ಬೆಡ್ ರೂಂ
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಮನೆಗಳು ಮಾರಾಟಕ್ಕಿವೆ**
ವಿದ್ಯಾನಗರ 40x60 (ಉತ್ತರ), ಸಿದ್ದವೀರಪ್ಪ ಬಡಾವಣೆ 40x70 (ಪೂರ್ವ) ಡುಪ್ಲೆಕ್ಸ್ , 30x40, ಮನೆ ಮತ್ತು ಮೇಲೆ ರೂಂಗಳು, ನಿಜಲಿಂಗಪ್ಪ ಬಡಾವಣೆ 30x35 ಉತ್ತರ ಬಾಗಿಲ ಮನೆ , 30x40 ಪೂರ್ವ, ಬಾಲಾಜಿ ಲೇಔಟ್ 30x40 (ಪೂರ್ವ), 30x50 (ಪಶ್ಚಿಮ) ಎಂ.ಸಿ.ಸಿ. 'ಎ' ಬ್ಲಾಕ್ 44x60 (ಪೂರ್ವ) ಮೇಲೆ ಕೆಳಗೆ ಮನೆ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
ಸುರೇಶ್ 95911 60520,
ಐಗೂರು ವಿಜಯಕುಮಾರ್ 99457 02495

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x46 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ, ಆಂಜನೇಯ ಬಡಾವಣೆಯಲ್ಲಿ 40x65 ಉತ್ತರ, ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ ದಕ್ಷಿಣ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ**
ಹೊಸ ಬಿಸಲೇರಿ ರಸ್ತೆಯಲ್ಲಿ ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ.94489 66128

**ಬೇಕಾಗಿದ್ದಾರೆ**
ಹರಿಹರ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ ಹಾಗೂ ಹೊರಗಿನ ಕಛೇರಿ ಕೆಲಸಕ್ಕೆ ಮತ್ತು ಇತರೆ ಕೆಲಸಕ್ಕೆ ಬೇಕಾಗಿದ್ದಾರೆ (ದ್ವಿಚಕ್ರ ವಾಹನ ಮತ್ತು ಚಾಲನಾ ಪರವಾನಿಗೆ ಹೊಂದಿರಬೇಕು) ಸಂಪರ್ಕಿಸಿ:
70195 88900
95388 70257

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಮೇನ್ ರೋಡ್, ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ:
82177 72482

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿ ಕೊಳ್ಳಿ, ಕಡಿಮೆ ದರದಲ್ಲಿ
72046 33302

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ 18 ರಿಂದ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ, 30x40, 30x57, 38 1/2x40 , (ಪಶ್ಚಿಮ), 30x40 (ಪೂರ್ವ), 30x40 (ಕಾರ್ನರ್ ಪೂರ್ವ), 44x30, 47x30, 30x40 (ಪೂರ್ವ), ಹೊಸ ಬನಶಂಕರಿ 30x55 (ಪಶ್ಚಿಮ) 30x60 (ಪೂರ್ವ ಉತ್ತರ) 30x60 (ಪೂರ್ವ+ಉತ್ತರ ಕಾರ್ನರ್), ಮಲ್ಲಿಕಾರ್ಜುನ ಬಡಾವಣೆ, 30x55 (ಪೂರ್ವ)
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
95911 60520 -ಸುರೇಶ್
99457 02495- ಐಗೂರು ವಿಜಯ್ ಕುಮಾರ್

**ಗೋಡೌನ್ ಬಾಡಿಗೆಗಿದೆ**
ದಾವಣಗೆರೆ ಎಪಿಎಂಸಿ 'ಎ' ಬ್ಲಾಕ್ ನಲ್ಲಿ 45x100 ಅಳತೆಯ ಗೋಡೌನ್ ಬಾಡಿಗೆಗೆ ಇದೆ.
ಸಂಪರ್ಕಿಸಿ :
ಮೊ.94481-14684

**ಮಳಿಗೆ ಬಾಡಿಗೆಗೆ ಇದೆ**
ಬಾಬು ಕ್ಲಿನಿಕ್ ಪಕ್ಕದಲ್ಲಿ ವಸಂತ ರೋಡ್ (ಆಸ್ಪತ್ರೆ ಪ್ರಾರಂಭವಾಗಿದೆ ಬೆ.10.30 ರಿಂದ ಮಧ್ಯಾಹ್ನ 12.30 ರವರೆಗೆ) ಸಂಪರ್ಕಿಸಿ:
97400 91291
88924 88265

**ಉಚಿತ 30 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ ರಿಟರ್ನ್ ಗಿಫ್ಟ್ 30 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
ಸಂಪರ್ಕಿಸಿ:
94805 64551
91418 74551

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ.
ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಕ್ಲಿನಿಕ್ ನಲ್ಲಿ ಕೆಲಸ ನಿರ್ವಹಿಸಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ.**
ವಿಳಾಸ: ಡಾ. ಎನ್.ಹೆಚ್.ಕೃಷ್ಣ, ಜೈನ್ ಲ್ಯಾಬ್ ಕೆಳಗೆ, ಮೋತಿವೀರಪ್ಪ ಕಾಲೇಜು ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ

**ಉತ್ತಮ ಜಲ್ಲಿ ದೊರೆಯುತ್ತದೆ**
20mm, 40mm, M-ಸ್ಯಾಂಡ್ P- ಸ್ಯಾಂಡ್ ದೊರೆಯುತ್ತದೆ.
ಸಿಗಂಧೂರೇಶ್ವರಿ ಬಿಲ್ಡಿಂಗ್ ಮೆಟೀರಿಯಲ್ ಸಪ್ಲೈಯರ್ಸ್, ದಾವಣಗೆರೆ.
85533 73710
91646 69272

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಹಳೇಪೇಟೆ ಖಂಡಪ್ಪನ ಗಲ್ಲಿಯಲ್ಲಿ 12x45 ಅಳತೆಯ AEH, ಸೋಲಾರ್, ಕಾರ್ಪೊರೇಷನ್ ವಾಟರ್ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ.94480-47506

**WANTED**
PUC & Any Degree with Basic computer Knowledge is Must & Tele Caller, For MALE & FEMALE
Contact: **Excelent electronics**
(Samsung Service center)
# 2137/1, 4th Main, 3rd Cross MCC 'A' Block Davanagere-577004
Tel : 98865 15100

**ಡ್ರೈವರ್ ಬೇಕಾಗಿದ್ದಾರೆ**
Bolero ಗಾಡಿಗೆ ನುರಿತ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ:
88619 45934

**ಬೇಕಾಗಿದ್ದಾರೆ**
ಸೈಂಟಿಫಿಕ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು/ ಮಧ್ಯ ವಯಸ್ಕರು ಬೇಕಾಗಿದ್ದಾರೆ.
ಡೆಲಿವರಿ ಬಾಯ್ಸ್ -03
ಡ್ರೈವರ್ ( ಮಹೀಂದ್ರ ಜೀಟೋ ಗೂಡ್ಸ್ ಗಾಡಿಗೆ) -01
ಸಂಪರ್ಕಿಸಿ : ವಿಶ್ವಾಸ್ ಸೈಂಟಿಫಿಕ್ ಕಂ. ಹದಡಿ ರಸ್ತೆ, ದಾವಣಗೆರೆ.
ಮೊ: 9620586349

**Vijay Para Medical College**
Golden Public School Near, DCM Town ship Davanagere.
DMLT- (Lab Technician)
DHT- Health Inspector
DMIT - X-ray Technician
DOT- Operation Theatre
Contact: 77601 55550

**ಡಾ॥ ಮಹೇಶ್ ರಾಜಶೇಖರಯ್ಯ**
Hematologist ಇವರು ದಿ. 20-01-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಕೆಲಸಕ್ಕೆ ಬೇಕಾಗಿದ್ದಾರೆ**
ಬೇಕರಿಯಲ್ಲಿ ಅನುಭವವುಳ್ಳ Main Worker, Cake Master ಗಳು ಬೇಕಾಗಿರುತ್ತಾರೆ. ಆಸಕ್ತರು ಸಂಪರ್ಕಿಸಿರಿ
79758 46679
94485 34147

**Wanted Teachers**
(Part time or Full Time)
No of posts: 1)BSc :-01, 2)BSc BEd(PCM):-01
NISARGA CONVENT & HIGH SCHOOL
SOG Badavane, Davangere.
Contact us:
99862 26454.

**ಮಹಿಳೆ ಬೇಕಾಗಿದ್ದಾರೆ**
ಕೆಲಸಕ್ಕೆ ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಡಿಸಿಎಂ ಕ್ವಾಟ್ರಸ್, ಆವರಗೆರೆ, ಬಾಡಾ ಕ್ರಾಸ್, ತೋಳಹುಣಸೆ ಸುತ್ತಮುತ್ತಲಿನವರಿಗೆ ಆದ್ಯತೆ. ಸಂಪರ್ಕಿಸಿ :
96117-44810

**WANTED**
Cashier, Sales girls
Computer Operator
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**EXCELLENCE ONLINE COACHING CLASSES**
VII To X (SCIENCE/MATHS)
ICSE/CBSE/STATE (ENG & KAN)
PUC I & II (P.C.M.B)
NEET/JEE-IIT FOUNDATION
Revision & Previous Years Question papers Solutions
Subject Experts from Dharwad
80503 12990

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ**
ಪಂಡಿತ್ ಪರಶುರಾಮ್ ಭಟ್
ಕೊಳ್ಳೇಗಾಲದ ವಂಶಪಾರಂಪರಿಕ ಜ್ಯೋತಿಷ್ಯರು ಇವರು ದಾವಣಗೆರೆಗೆ ಪ್ರಥಮ ಬಾರಿಗೆ ಆಗಮಿಸಿದ್ದಾರೆ. ನಿಮ್ಮ ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ ಉಚಿತ ಪರಿಹಾರ ಮಾಡಿಕೊಡುತ್ತಾರೆ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಧನಪ್ರಾಪ್ತಿ, ಪ್ರೇಮವಿಚಾರ, ಮಾನಸಿಕ ಸಮಸ್ಯೆ, ವ್ಯಾಪಾರದಲ್ಲಿ ಲಾಭ-ನಷ್ಟ, ಮನೆಯಲ್ಲಿ ಅಶಾಂತಿ, ಶತ್ರುಕಾಟ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ ಇಂದೇ ಭೇಟಿ ಕೊಡಿ.
ವಿಳಾಸ : ಹೊಸ ಕೋರ್ಟ್ ಎದುರು, ಪಿ.ಬಿ.ರಸ್ತೆ, ದಾವಣಗೆರೆ
ಮೊ: 99808 89328

**JOBS**
MCS ACADEMY
Training & Placement Cell
98444 92888

**FOR SALE**
Honda Crizea
Active Honda
94812 47552

**ಕೆಲ್ಸಬೇಕಾ.Com**
kelsabeka.com, job Consultancy
Be professional & Be Educated
ನೀವು ಕೆಲಸಕ್ಕಾಗಿ ಹುಡುಕಾಟ ನಡೆಸಿದ್ದೀರಾ? ಕೆಲಸ ಇಲ್ಲವೇ, ಕೆಲಸವಿಲ್ಲದೇ ಚಿಂತೆಯಲ್ಲಿದ್ದೀರಾ? ಹಾಗಾದರೆ ಇಂದೇ ಬನ್ನಿ ನಿಮ್ಮ ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗ ನಮ್ಮಲ್ಲಿವೆ. We Provide all Types of Job
96869 58555, 96869 49555

**WANTED**
Looking For A Person From Any Corporate Background For Our New Firm In Davanagere
Contact
90970 70333

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಪ್ರೊಫೆಷನಲ್ ಮೇಕಪ್ ಆರ್ಟಿಸ್ಟ್ ತರಬೇತಿ**
50% ಆಫರ್ ಫೀನಲ್ಲಿ ನಡೆಯುತ್ತದೆ. ಮೊದಲ ಬಂದ 10 ಜನರಿಗೆ ಮಾತ್ರ ಅವಕಾಶ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
CS ಮೇಕಪ್ ಸ್ಟುಡಿಯೋ
ವಿನೋಬನಗರ, ದಾವಣಗೆರೆ.
70190 73324

**WANTED**
**ಬೇಕಾಗಿದ್ದಾರೆ**
Waiters - ವೇಟರ್ಸ್,
Stewards- ಸ್ಟೀವರ್ಡ್ಸ್
Experienced Preferred
ಆಕರ್ಷಕ ಸಂಬಳ ನೀಡಲಾಗುವುದು
ಸಂಪರ್ಕಿಸಿ:
63628 20412
93809 74740

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಶ್ರೀ ನಿಧಿ ಎಜುಕೇಷನಲ್ ಟ್ರಸ್ಟ್- ದಾವಣಗೆರೆ.**
**ಪ್ರಿನ್ಸ್ ದೂರ ಶಿಕ್ಷಣ ಕಾಲೇಜ್**
(Distance Education) (UGC, DEB, & AICTE Approved university)
SSLC, PUC, B.A, B.Com, B.Sc, B.C.A, M.A, M.Com, M.Sc, M.S.W, MBA, MCA, Diploma, B.E, LLB, LLM, Ph.D & all Courses
97408 51555, 97405 52555

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**SAHYADRI PARAMEDICAL COLLEGE**
SSLC ಪಾಸ್, PUC ಪಾಸ್/ಫೇಲ್
Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ.
9019580600, 86601 95955

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

# ದೀಕ್ಷೆ ಪಡೆದ ಪಾಯಲ್

**(1ನೇ ಪುಟದಿಂದ)** ಸೌಲಿ ಭದ್ರಜೀ ಮಹಾರಾಜ, ಚಂದನ್ ಬಾಲಾಜಿ ಮಹಾರಾಜ, ದೇವೇಂದ್ರ ಪ್ರಭಾಜಿ ಮಹಾರಾಜ, ಧರ್ಮ ಜ್ಯೋತಿ ಮಹಾರಾಜರುಗಳು ಯುವತಿಗೆ ಸನ್ಯಾಸ ದೀಕ್ಷೆ ಸ್ವೀಕರಿಸಲು ಆದೇಶ ನೀಡಿದರು.

ಕಾರ್ಯಕ್ರಮದಲ್ಲಿ ಜೈನ ಸಮಾಜದ ಅಧ್ಯಕ್ಷ ಧನರಾಜ್ ಜೈನ್, ಉಪಾಧ್ಯಕ್ಷ ಸುಮೇರಿ ಮಲ್ ಜೈನ್ , ಮಹಾವೀರ ಕುಮಾರ, ಅಶೋಕ ಕುಮಾರ, ಕಾಂತಿಲಾಲ್ ಜೈನ್, ಉತ್ತಮ ಚಂದ್ ಜೈನ್ , ಗೌತಮ್ ಚಂದ್ , ಮಹಾವೀರ ಭಂಡಾರಿ, ಮಹಾವೀರ ಬನ್ಸಿಲಾಲ್ , ಹನುಮಾನ್ ಚಂದ್ , ಗಣಪತಿ ರಾಜ್ ಜೈನ, ಸಂದೀಪ, ವಿಜಯರಾಜ್ ಸೇರಿದಂತೆ ಜೈನ ಸಮುದಾಯದ ಮುಖಂಡರು, ಮಹಿಳೆಯರು ಪಾಲ್ಗೊಂಡಿದ್ದರು.

# ಮಹಾಜನ್ ವರದಿಯೇ ಅಂತಿಮ

**(1ನೇ ಪುಟದಿಂದ)** ಪ್ರದೇಶಗಳನ್ನು ಆಕ್ರಮಿಸಿದ್ದಾರೆ ಎಂಬುದು ತಿಳಿಯುತ್ತದೆ. ಸಹಬಾಳ್ವೆ ನಡೆಸುತ್ತಿರುವ ವರಲ್ಲಿ ವಿಷ ಬೀಜ ಬಿತ್ತುವುದು ದೇಶ ದ್ರೋಹಿ ಕೃತ್ಯ ಎನ್ನಬೇಕಾಗುತ್ತದೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಇದೇ ಸಂದರ್ಭದಲ್ಲಿ ಸಿದ್ದರಾಮಯ್ಯ, ಪ್ರತ್ಯೇಕ ಟ್ವೀಟ್ ಮೂಲಕ, ಠಾಕ್ರೆ ಹೇಳಿಕೆ ಅಧಿಕ ಪ್ರಸಂಗತನ ಎಂದಿದ್ದಾರೆ. ಇತ್ಯರ್ಥವಾಗಿರುವ ವಿಷಯವನ್ನು ಕೆಣಕಲು ಬರಬೇಡಿ, ಕರ್ನಾಟಕದ ನೆಲ-ಜಲ ಮತ್ತು ಭಾಷೆ ರಕ್ಷಣೆ ನಮ್ಮೆಲ್ಲರ ಕರ್ತವ್ಯ, ಈ ಬಗ್ಗೆ ರಾಜಿಯೂ ಇಲ್ಲ, ರಾಜಕೀಯವೂ ಇಲ್ಲ ಎಂದಿದ್ದಾರೆ.

# ಕುಂದುವಾಡ ಕೆರೆ ಗಟ್ಟಿ ಮಾಡುತ್ತೇವೆ, ಕಾಂಕ್ರೀಟೀಕರಣ ಅಲ್ಲ

**ಮಳೆಗಾಲದ ಒಳಗೆ ಕೆರೆ ಪಾಲಿಕೆಗೆ ಹಸ್ತಾಂತರ : ರವೀಂದ್ರ ಮಲ್ಲಾಪುರ**

ದಾವಣಗೆರೆ, ಜ. 18 - ನಗರದ ಕುಂದುವಾಡ ಕೆರೆಯನ್ನು 15 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ವೇಳೆ ಕೆರೆಯನ್ನು ಗಟ್ಟಿ ಮಾಡಲಾಗುವುದೇ ಹೊರತು, ಕಾಂಕ್ರೀಟೀಕರಣ ಮಾಡುತ್ತಿಲ್ಲ ಎಂದು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಸ್ಪಷ್ಟಪಡಿಸಿದ್ದಾರೆ.

ಪತ್ರಿಕೆಯೊಂದಿಗೆ ಮಾತನಾಡಿರುವ ಅವರು, ಕೆಲವರು ಮಾತನಾಡುತ್ತಿರುವ ಹಾಗೆ ಕುಂದುವಾಡ ಕೆರೆಯ ತಳಕ್ಕೆ ಇಲ್ಲವೇ ಕೆರೆಯ ದಂಡೆಗೆ ಕಾಂಕ್ರೀಟ್ ಹಾಕುವ ಕೆಲಸ ಮಾಡುತ್ತಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಕೆರೆಯ ದಂಡೆಯನ್ನು ಸೀಳುತ್ತಿಲ್ಲ. ದಂಡೆಯ ಒಳಭಾಗದಲ್ಲಿ ದುರ್ಬಲ ಆಗಿರುವ ಕಡೆ ಸರಿ ಪಡಿಸಲಾಗುತ್ತಿದೆ. ಈ ಭಾಗದಲ್ಲಿ ಕಲ್ಲು ಚಪ್ಪಡಿ ತೆಗೆದು ಮರು ಹೊಂದಿಕೆ ಮಾಡುತ್ತೇವೆ. ಇದೇ ಕಾಮಗಾರಿಯ ಮೂಲ ಉದ್ದೇಶ ಎಂದವರು ವಿವರಿಸಿದ್ದಾರೆ.

ಮುಳ್ಳು ಕಂಟಿಗಳನ್ನು ತೆಗೆಸುತ್ತೇವೆ. ಇರುವ ಕಲ್ಲು ಚಪ್ಪಡಿಗಳನ್ನು ಮರು ಹೊಂದಿಕೆ ಮಾಡುತ್ತೇವೆ. ಇನ್ನು 5 - 10 ವರ್ಷ ಮತ್ತೆ ಅಲ್ಲಿ ಗಿಡ ಗಂಟಿ ಬರದ ರೀತಿಯಲ್ಲಿ ಸಿಮೆಂಟ್ ಹೊದಿಕೆ ಹಾಕುತ್ತೇವೆ ಎಂದವರು ಹೇಳಿದ್ದಾರೆ.

ಕೆರೆಯ ಕುಂದುವಾಡದ ಕಡೆಯ ಏರಿಯ ಕಡೆ ನೀರು ಸೋರುತ್ತಿದೆ. ಆ ಭಾಗವನ್ನು ಬಲಗೊಳಿಸಲಾಗುವುದು ಎಂದು ಮಲ್ಲಾಪುರ ಹೇಳಿದ್ದಾರೆ.

ನಗರದ ಜನತೆಗೆ ನೀರು ಪೂರೈಕೆಯ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕೆರೆಯಲ್ಲಿ ಬೇಸಿಗೆಗೆ ನೀರು ಖಾಲಿ ಆಗಿದೆ. ಆನಂತರ ನಗರ ಪಾಲಿಕೆಯವರು ಕೆರೆಯನ್ನು ಕೊಟ್ಟಿದ್ದಾರೆ.

ಮಳೆಗಾಲದ ಒಳಗೆ ಕೆರೆಯ ಏರಿ ಅಭಿವೃದ್ಧಿ ಪಡಿಸುತ್ತೇವೆ. ನಂತರ ಕೆರೆಯನ್ನು ನೀರು ತುಂಬಿಕೊಳ್ಳಲು ಪಾಲಿಕೆಗೆ ನೀಡುತ್ತೇವೆ ಎಂದು ತಿಳಿಸಿದ್ದಾರೆ.

ಆನಂತರದಲ್ಲಿ ಕೆರೆಗೆ ಸಂಬಂಧಿಸಿದ ಉಳಿದ ಕಾಮಗಾರಿಗಳನ್ನು ನಿರ್ವಹಿಸಲಾಗುವುದು ಎಂದವರು ಹೇಳಿದ್ದಾರೆ.

ಕೆರೆಯ ಕಾಮಗಾರಿಯಿಂದ ಅಲ್ಲಿರುವ ಪ್ರಾಣಿ - ಪಕ್ಷಿಗಳಿಗೆ ತೊಂದರೆಯಾಗಲಿದೆ ಎಂಬ ವಾದವನ್ನು ಇದೇ ವೇಳೆ ತಳ್ಳಿ ಹಾಕಿರುವ ಅವರು, ಒಂದು ಬಾರಿ ಕೆರೆ ಒಣಗಿದರೂ ಸಹ ಪ್ರಾಣಿ - ಪಕ್ಷಿಗಳು ಅದರದ್ದೇ ಆದ ದಾರಿ ಮಾಡಿಕೊಂಡಿರುತ್ತವೆ ಎಂದು ತಿಳಿಸಿದರು.

# ಸಂಘಟಿತ ವಲಯಕ್ಕೆ ಸಣ್ಣ ಆಹಾರ ಸಂಸ್ಕರಣಾ ಉದ್ಯಮ



ಬೆಂಗಳೂರು, ಜ.18 - ಒಂದು ಜಿಲ್ಲೆ, ಒಂದು ಉತ್ಪನ್ನ ಅಥವಾ ಬೆಳೆ ಪ್ರೋತ್ಸಾಹದ ಅಂಗವಾಗಿ ಅಸಂಘ ಟಿತ ವಲಯದ ಸಣ್ಣ ಆಹಾರ ಸಂಸ್ಕ ರಣಾ ಉದ್ದಿಮೆಗಳ ವೃದ್ಧಿ, ಅವುಗಳ ಸ್ಪರ್ಧಾತ್ಮಕತೆ ಹೆಚ್ಚಿ ಸುವ ಮತ್ತು ಅವುಗಳನ್ನು ಸಂಘಟಿತ ವಲಯಕ್ಕೆ ತರಲು ಕೃಷಿ ಸಚಿವ ಬಿ.ಸಿ.ಪಾಟೀಲ್ ಮುಂದಾಗಿದ್ದಾರೆ.

ಕೇಂದ್ರ ಸರ್ಕಾರದ ಆತ್ಮನಿರ್ಭರ್ ಭಾರತ ಅಭಿಯಾನದ ಭಾಗವಾಗಿ, ರಾಜ್ಯ ಸರ್ಕಾರದ ಸಹ ಯೋಗದೊಂದಿಗೆ ಆಹಾರ ಸಂಸ್ಕ ರಣಾ ಉದ್ದಿಮೆಗಳು ಮತ್ತು ಸಣ್ಣ ಆಹಾರ ಸಂಸ್ಕ ರಣಾ ಉದ್ಯಮಗಳನ್ನು ಕ್ರಮಬದ್ಧಗೊಳಿಸುವಿಕೆ ಈ ಯೋಜನೆ ಅನುಷ್ಠಾನದ ಉದ್ದೇಶವಾಗಿದೆ.

ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಸಂಘಗಳು ಹಾಗೂ ಉತ್ಪಾದಕ ಸಹಕಾರಿ ಸಂಘಗಳಿಗೆ ಉತ್ತೇಜನ ನೀಡುವುದು ಈ ಯೋಜ ನೆಯಡಿ ಸೇರಿದೆ. ಅಸಂಘಟಿತ ವಲಯದಲ್ಲಿರುವ ಸಣ್ಣ ಆಹಾರ ಸಂಸ್ಕರಣಾ ಉದ್ದಿಮೆಗಳು ಹಾಗೂ ಅವುಗಳ ಸ್ಪರ್ಧಾತ್ಮಕತೆ ಹೆಚ್ಚಿಸುವಲ್ಲಿ ರೈತರಿಗೆ ನೀಡುತ್ತಿರುವ ಒಂದು ಜಿಲ್ಲೆ ಒಂದು ಉತ್ಪನ್ನ (ಬೆಳೆ) ತರಬೇತಿ ಕಾರ್ಯಕ್ರಮ, ಈ ತಿಂಗಳ 19 ರಂದು ಉದ್ಘಾಟನೆಯಾಗಲಿದೆ.

ಕೃಷಿ ಇಲಾಖೆ ಹಾಗೂ ಕೃಷಿ ಸಂಬಂಧಿತ ಇಲಾಖೆಗಳು ಒಂದು ಜಿಲ್ಲೆ, ಒಂದು ಉತ್ಪನ್ನ (ಬೆಳೆ) ಯೋಜನೆಯಡಿ ಉತ್ಪನ್ನಗಳನ್ನು ಗುರುತಿಸಿ, ಈ ಉತ್ಪನ್ನದ ಮೌಲ್ಯವರ್ಧನೆ, ಸಂಸ್ಕರಣೆ, ಪ್ಯಾಕಿಂಗ್, ಬ್ರ್ಯಾಂಡ್ ಅಭಿವೃದ್ಧಿ, ಮಾರುಕಟ್ಟೆ ಪ್ರೋತ್ಸಾಹ ಕುರಿತು ರೈತರಿಗೆ ತರಬೇತಿ ನೀಡಲಾಗುತ್ತದೆ.

ಹಣ್ಣು, ತರಕಾರಿ ಸಂಸ್ಕರಣೆ ಮತ್ತು ಮಾರುಕಟ್ಟೆ ಒಳಗೊಂಡ ಮೊದಲ ತರಬೇತಿ ಪೂರ್ಣಗೊಂಡಿದ್ದು, ಒಟ್ಟು 10 ತರಬೇತಿಗಳು ಈ ವರ್ಷದ ಮಾರ್ಚ್‌ವರೆಗೆ ನಡೆಯಲಿವೆ.

ಪ್ರತಿ ತಾಲ್ಲೂಕಿನಿಂದ ಇಬ್ಬರು ರೈತರನ್ನು ಆಯ್ಕೆ ಮಾಡಿ ಒಂದು ಗುಂಪು ರಚಿಸಿ ಒಟ್ಟು 500 ಜನರಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. ರೈತರು ತರಬೇತಿ ಕಾರ್ಯಕ್ರಮ ಸದುಪಯೋಗಪಡಿಸಿಕೊಂಡು ಲಾಭದಾಯಕ ಹಾಗೂ ಪ್ರಗತಿ ಪರ ರೈತೋದ್ಯಮಿ ಆಗುವಂತೆ ಬಿ.ಸಿ.ಪಾಟೀಲ್ ಮನವಿ ಮಾಡಿದ್ದಾರೆ.

# ಸಚಿವರ ಕಾರ್ಯಕ್ಷಮತೆ ಒರೆಗೆ ಹಚ್ಚಲಿರುವ ಹೈಕಮಾಂಡ್

**ಕೆಲ ಸಚಿವರ ಕಾರ್ಯನಿರ್ವಹಣೆ ಬಗ್ಗೆ ಅಮಿತ್ ಷಾ ಅಸಮಾಧಾನ**

ಬೆಂಗಳೂರು, ಜ.18 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಂಪುಟದಲ್ಲಿರುವ ಸಚಿವರ ಕಾರ್ಯಕ್ಷಮತೆ ಬಗ್ಗೆ ಮಾಹಿತಿ ನೀಡುವಂತೆ ರಾಜ್ಯ ಕೋರ್ ಕಮಿಟಿಗೆ ಬಿಜೆಪಿ ರಾಷ್ಟ್ರೀಯ ವರಿಷ್ಠರು ಆದೇಶ ಮಾಡಿದ್ದಾರೆ.

ಕೇಂದ್ರ ಸಂಸದೀಯ ಸಚಿವ ಪ್ರಹ್ಲಾದ್ ಜೋಷಿ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಇತ್ತೀಚೆಗಷ್ಟೇ ಸಂಪುಟ ಸೇರಿರುವ ಅರವಿಂದ ಲಿಂಬಾವಳಿ ಅವರುಗಳಿಗೆ ಇದರ ಹೊಣೆಗಾರಿಕೆ ವಹಿಸಲಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಇತ್ತೀಚೆಗೆ ಎರಡು ದಿನಗಳ ರಾಜ್ಯ ಭೇಟಿ ಸಂದರ್ಭದಲ್ಲಿ ರಾಜ್ಯ ಕೋರ್ ಕಮಿಟಿ ಸದಸ್ಯರ ಜೊತೆ ಪಕ್ಷ ಸಂಘಟನೆ ಮತ್ತು ರಾಜ್ಯ ಸರ್ಕಾರದ ಕಾರ್ಯವೈಖರಿ ಬಗ್ಗೆ ಚರ್ಚಿಸಿದ್ದರು. ಸಭೆಯಿಂದ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಇತರೆ ಸದಸ್ಯರು ತೆರಳಿದ ನಂತರ ಈ ನಾಲ್ಕು ಮಂದಿಯನ್ನು ಪ್ರತ್ಯೇಕವಾಗಿ ಉಳಿಸಿಕೊಂಡು ರಾಜ್ಯದ ಸ್ಥಿತಿಗತಿ ಬಗ್ಗೆ ಮಾಹಿತಿ ಪಡೆದರು.

ಈ ಸಂದರ್ಭದಲ್ಲೇ ರಾಜ್ಯದಲ್ಲಿ ಪಕ್ಷ ಸಂಘಟನೆಗೆ ಹಿನ್ನಡೆಯಾಗಿರುವುದು, ಬಹುತೇಕ ಸಚಿವರು ತಮ್ಮ ಕ್ಷೇತ್ರಕ್ಕೆ ಸೀಮಿತವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ಪಡೆದರು.

ಹೊರಗಿನಿಂದ ಬಂದವರು ಯಡಿಯೂರಪ್ಪ ಸಂಪುಟದಲ್ಲಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ನಮ್ಮವರಿಗೆ ಏನಾಗಿದೆ ಧಾಡಿ, ಇವರೇನು ಸ್ವಯಂ ಗುತ್ತಿಗೆ ಪಡೆದಿದ್ದಾರೆಯೇ ಎಂದು ಖಾರವಾಗಿ ಕಿಡಿಕಾರಿದ್ದಾರೆ. ಇವರ ಬಗ್ಗೆ ನನಗೆ ಪೂರ್ಣ ಮಾಹಿತಿ ನೀಡಿ, ನನಗೆ ಸರ್ಕಾರ ಮತ್ತು ಪಕ್ಷ ಎರಡೂ ಮುಖ್ಯ, ನಾನು ಏನು ಮಾಡಬೇಕೋ ಅದನ್ನು ಮಾಡುತ್ತೇನೆ. ನೀವುಗಳು ವರದಿ ನೀಡಿದ ನಂತರ ದಕ್ಷ ಅಧಿಕಾರಿಗಳನ್ನು ಈ ಸಚಿವರ ಇಲಾಖೆಗಳಿಗೆ ನಿಯೋಜಿಸುವಲ್ಲಿ ನಾನೇ ಆಸಕ್ತಿ ವಹಿಸುತ್ತೇನೆ ಎಂದು ಅಮಿತ್ ಷಾ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಧಿಕಾರಿಗಳ ಜೊತೆ ಶಾಮೀಲಾಗಿ ಕೆಲವು ಸಚಿವರು ಜನಪರ ಕೆಲಸಗಳನ್ನು ಮರೆತಿದ್ದಾರೆ. ಇದೂ ಸೇರಿದಂತೆ ಟೀಕಾ ಪ್ರಹಾರಗಳಿಂದ ಪಕ್ಷಕ್ಕೆ ಭಾರೀ ಹಿನ್ನಡೆಯಾಗಿದೆ.

ಕರ್ನಾಟಕದಲ್ಲಿ ಮತ್ತೆ ಪಕ್ಷವನ್ನು ಸರಿ ಮಾರ್ಗಕ್ಕೆ ತರಲು ನೀಲಿ ನಕಾಶೆ ನೀಡಿ, ಮುಂದಿನ ಎರಡು ವರ್ಷಗಳಲ್ಲಿ ಅದನ್ನು ಅನುಷ್ಠಾನಗೊಳಿಸಿ, ರಾಜ್ಯದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರೋಣ ಎಂದಿದ್ದಾರೆ.

ಪಕ್ಷ ಮತ್ತು ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸುವಂತಹ ಹೇಳಿಕೆಗಳು ನಮ್ಮ ಶಾಸಕರಿಂದ ಇನ್ನು ಮುಂದೆ ಬರಬಾರದು, ಆ ರೀತಿ ಹೇಳಿಕೆ ನೀಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ ಎಂದಿದ್ದಾರೆ.

ಅಲ್ಲದೆ, ಆಡಳಿತದಲ್ಲೂ ಕೆಲವು ಬದಲಾವಣೆ ಆಗಬೇಕಿದೆ, ಅದು ಯಾವ ರೀತಿ ಆಗಬೇಕು ಮತ್ತು ಆಡಳಿತದ ಬಗ್ಗೆ ಸಾರ್ವಜನಿಕರಲ್ಲಿನ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸುವ ಕುರಿತು ಕಾರ್ಯಕ್ರಮ ರೂಪಿಸೋಣ. ಈ ಬಗ್ಗೆ ಗಮನ ಹರಿಸಿ ನನಗೆ ಮಾಹಿತಿ ನೀಡಿ ಎಂದು ಈ ನಾಲ್ವರಿಗೆ ಹೊಣೆಗಾರಿಕೆ ನೀಡಿದ್ದಾರೆ.

# ಉತ್ತಮ ಭವಿಷ್ಯ ಇದೆ, ಪಕ್ಷದ ವೇದಿಕೆಯಲ್ಲಿ ಮಾತನಾಡಿ

**ರೇಣುಕಾಚಾರ್ಯಗೆ ಡಿಸಿಎಂ ಸವದಿ ಕಿವಿಮಾತು**

ದಾವಣಗೆರೆ, ಜ. 18 - ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರಿಗೆ ಒಳ್ಳೆಯ ಭವಿಷ್ಯ ಇದೆ. ಅವರು ತಮ್ಮ ಮಾತುಗಳನ್ನು ಸಾರ್ವಜನಿಕ ವೇದಿಕೆಯ ಬದಲು, ಪಕ್ಷದಲ್ಲಿ ಹೇಳಲಿ ಎಂದು ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಕಿವಿಮಾತು ಹೇಳಿದ್ದಾರೆ.

ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಹಿರಿಯ ಸಚಿವರು ರಾಜೀನಾಮೆ ನೀಡಿ, ಹೊಸಬರಿಗೆ ಅವಕಾಶ ಕಲ್ಪಿಸಬೇಕೆಂದು ರೇಣುಕಾಚಾರ್ಯ ಹೇಳಿದ ಬಗ್ಗೆ ಕೇಳಿದಾಗ ಈ ಪ್ರತಿಕ್ರಿಯೆ ನೀಡಿದ್ದಾರೆ.

ರೇಣುಕಾಚಾರ್ಯ ಹೇಳಿಕೆ ವೈಯಕ್ತಿಕ ಅಭಿಪ್ರಾಯ. ಸಚಿವರಾಗಬೇಕು ಎಂಬ ಬಯಕೆ ತಪ್ಪಲ್ಲ. ಪಕ್ಷದ ವೇದಿಕೆಯಲ್ಲಿ ಈ ಮಾತುಗಳನ್ನು ಹೇಳಬೇಕು. ಈ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ನಿನ್ನೆ ಕಿವಿಮಾತು ಹೇಳಿದ್ದಾರೆ ಎಂದು ಹೇಳಿದರು.

ನಾವೆಲ್ಲ ಸ್ನೇಹಿತರು. ರೇಣುಕಾಚಾರ್ಯ ಅವರಿಗೆ ಒಳ್ಳೆಯ ಭವಿಷ್ಯ ಇದೆ ಎಂದೂ ಸವದಿ ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಬಿಜೆಪಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರದ ಕಾರಣ ಸಚಿವ ಸ್ಥಾನಗಳ ಹಂಚಿಕೆಯಲ್ಲಿ ಪ್ರಾದೇಶಿಕ ಅಸಮಾಧಾನವಾಗಿದೆ ಎಂದು ಮತ್ತೊಂದು ಪ್ರಶ್ನೆಗೆ ಒಪ್ಪಿಕೊಂಡ ಸಚಿವರು, ಮುಂದಿನ ದಿನಗಳಲ್ಲಿ ಪ್ರದೇಶವಾರು ಸಚಿವ ಸ್ಥಾನದ ಚಿಂತನೆ ನಡೆಯಲಿದೆ ಎಂದಿದ್ದಾರೆ.

ಮರಾಠಿ ಭಾಷಿಗರ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರ್ಪಡೆ ಮಾಡಿಕೊಳ್ಳುವುದಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿರುವುದರ ಬಗ್ಗೆಪ್ರತಿಕ್ರಿಯಿಸಿದಅವರು,ಮುಖ್ಯಮಂತ್ರಿಯಾದವರು ಏನಾದರೂ ಹೇಳುವಾಗ ಎಚ್ಚರಿಕೆ ಇರಬೇಕು. ಸಾವಿರ ಜನ ಮುಖ್ಯಮಂತ್ರಿಗಳು ಬಂದರೂ ಬೆಳಗಾವಿ ಕರ್ನಾಟಕದಲ್ಲೇ ಇರುತ್ತದೆ ಎಂದರು.

# ಕೊಟ್ಟೂರು : ಗ್ರಾ. ಪಂ.ಗಳ ಅಧ್ಯಕ್ಷರ-ಉಪಾಧ್ಯಕ್ಷರ ಮೀಸಲಾತಿ ಪ್ರಕಟ

ಕೊಟ್ಟೂರು, ಜ.18- ತಾಲ್ಲೂಕಿನ ಹದಿನಾಲ್ಕು ಗ್ರಾಮ ಪಂಚಾಯಿತಿಗಳ ಮೊದಲ ಹಂತದ ಮೂವತ್ತು ತಿಂಗಳ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿ ಪ್ರಕಟಿಸಲಾಗಿದೆ.

ಜಿಲ್ಲಾಧಿಕಾರಿ ಪವನ್‌ಕುಮಾರ್ ಮಾಲಪಾಟಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಭೆಯಲ್ಲಿ ಈ ಮೀಸಲಾತಿಯನ್ನು ಪ್ರಕಟಿಸಲಾಯಿತು. ಮೀಸಲಾತಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಮೀಸಲಾತಿಯನ್ನು ನಿಯಮಾನುಸಾರ ಅಧ್ಯಕ್ಷರ, ಉಪಾಧ್ಯಕ್ಷರ ಮೀಸಲಾತಿಯನ್ನು ಪರಿಶೀಲಿಸಿ ನಿಗದಿಪಡಿಸಲಾಗಿದೆ.

ಅಪರ ಜಿಲ್ಲಾಧಿಕಾರಿ ಪಿ.ಎಸ್. ಮಂಜುನಾಥ, ಹರಪನಹಳ್ಳಿ ಸಹಾಯಕ ಆಯುಕ್ತ ಪ್ರಸನ್ನಕುಮಾರ್, ಕೊಟ್ಟೂರು ತಹಶೀಲ್ದಾರ್ ಜಿ. ಅನಿಲ್‌ಕುಮಾರ್, ತಾಲ್ಲೂಕು ಪಂಚಾಯಿತಿ ಇಒ ಬಾಬು ಎಂ, ಸಿಪಿಐ ದೊಡ್ಡಪ್ಪ ಹಾಜರಿದ್ದು ಮೀಸಲಾತಿ ಪ್ರಕಟಣೆಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಸಿ.ಮ. ಗುರುಬಸವರಾಜ್ ನಿರೂಪಿಸಿದರು.

ಕೊಟ್ಟೂರು ತಾಲ್ಲೂಕಿನ ಗ್ರಾಮ ಪಂಚಾಯಿತಿಗಳ ಅಧ್ಯಕ್ಷ/ಉಪಾಧ್ಯಕ್ಷರ ಮೀಸಲಾತಿ ಪಟ್ಟಿ ಹೀಗಿದೆ.

ಉಜ್ಜಿನಿ : ಅಧ್ಯಕ್ಷರು - ಪ್ರವರ್ಗ-'ಎ', ಉಪಾಧ್ಯಕ್ಷರು: ಎಸ್‌ಸಿ ಮಹಿಳೆ. ಕೋಗಳಿ : ಅಧ್ಯಕ್ಷರು - ಪ್ರವರ್ಗ-'ಎ' ಮಹಿಳೆ, ಉಪಾಧ್ಯಕ್ಷರು : ಎಸ್‌ಟಿ. ಕೆ. ಅಯ್ಯನಹಳ್ಳಿ : ಅಧ್ಯಕ್ಷರು - ಸಾಮಾನ್ಯ, ಉಪಾಧ್ಯಕ್ಷರು : ಎಸ್‌ಸಿ ಮಹಿಳೆ. ದೂಪದಹಳ್ಳಿ : ಅಧ್ಯಕ್ಷರು - ಸಾಮಾನ್ಯ, ಉಪಾಧ್ಯಕ್ಷರು : ಎಸ್‌ಟಿ ಮಹಿಳೆ. ಕಂದಗಲ್ಲು : ಅಧ್ಯಕ್ಷರು - ಸಾಮಾನ್ಯ, ಉಪಾಧ್ಯಕ್ಷರು : ಸಾಮಾನ್ಯ ಮಹಿಳೆ. ಹಾಳ್ಯಾ : ಅಧ್ಯಕ್ಷರು - ಸಾಮಾನ್ಯ, ಉಪಾಧ್ಯಕ್ಷರು : ಸಾಮಾನ್ಯ ಮಹಿಳೆ. ನಿಂಬಳಗೆರೆ : ಅಧ್ಯಕ್ಷರು - ಸಾಮಾನ್ಯ ಮಹಿಳೆ, ಉಪಾಧ್ಯಕ್ಷರು : ಸಾಮಾನ್ಯ. ತೂಲಹಳ್ಳಿ : ಅಧ್ಯಕ್ಷರು - ಸಾಮಾನ್ಯ ಮಹಿಳೆ, ಉಪಾಧ್ಯಕ್ಷರು : ಸಾಮಾನ್ಯ. ಕಾಳಪುರ : ಅಧ್ಯಕ್ಷರು - ಸಾಮಾನ್ಯ ಮಹಿಳೆ, ಉಪಾಧ್ಯಕ್ಷರು : ಎಸ್‌ಸಿ. ಅಲಬೂರು : ಅಧ್ಯಕ್ಷರು - ಎಸ್‌ಸಿ, ಉಪಾಧ್ಯಕ್ಷರು : ಸಾಮಾನ್ಯ ಮಹಿಳೆ. ಅಂಬಳಿ : ಅಧ್ಯಕ್ಷರು - ಎಸ್‌ಸಿ ಮಹಿಳೆ, ಉಪಾಧ್ಯಕ್ಷರು : ಸಾಮಾನ್ಯ. ರಾಂಪುರ : ಅಧ್ಯಕ್ಷರು - ಎಸ್‌ಸಿ ಮಹಿಳೆ, ಉಪಾಧ್ಯಕ್ಷರು: ಪ್ರವರ್ಗ-'ಎ'. ನಾಗರಕಟ್ಟೆ : ಅಧ್ಯಕ್ಷರು - ಎಸ್‌ಟಿ, ಉಪಾಧ್ಯಕ್ಷರು : ಪ್ರವರ್ಗ 'ಎ' ಮಹಿಳೆ. ಚಿರಿಬಿ : ಅಧ್ಯಕ್ಷರು - ಎಸ್‌ಟಿ ಮಹಿಳೆ, ಉಪಾಧ್ಯಕ್ಷರು : ಸಾಮಾನ್ಯ.

## ನಗರದಲ್ಲಿ ಮಹಾಯೋಗಿ ವೇಮನ ಜಯಂತಿ ಇಂದು

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀಮಹಾಯೋಗಿ ವೇಮನ ಜಯಂತಿಯನ್ನು ಸರಳವಾಗಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ಶ್ರೀರಾಮ ಮಂದಿರ ನಿರ್ಮಾಣಕ್ಕೆ ದೇವರಮನೆ ಶಿವಕುಮಾರ್ ದೇಣಿಗೆ



ದಾವಣಗೆರೆ,ಜ.18- ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಮಹಾನಗರ ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್ ಅವರು 50 ಸಾವಿರ ರೂ.ಗಳ ಚೆಕ್ಕನ್ನು ರಾಷ್ಟ್ರೀಯ ಆರೆಸ್ಸೆಸ್ ಕಾಂತ ಸಂಚಾಲಕರಾದ ಜಿ. ಉಮಾಪತಿ ಅವರಿಗೆ ನೀಡಿದರು ಈ ಸಂದರ್ಭದಲ್ಲಿ ಶ್ರೀಮತಿ ದೇವರಮನೆ ರತ್ನಮ್ಮ ಮಹಾರುದ್ರಪ್ಪ, ಬಿಜೆಪಿ ಮುಖಂಡ ಟಿ.ಎಸ್. ಜಯರುದ್ರೇಶ್, ಅಜಿತ್ ಓಸ್ವಾಲ್ ಅವರು ಉಪಸ್ಥಿತರಿದ್ದರು.

## ಸುಪ್ರೀಂ ನ್ಯಾಯಮೂರ್ತಿ ಸಂಬಂಧಿಕರಿಂದ ಬೇನಾಮಿ ವಹಿವಾಟು

**ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ**

ನವದೆಹಲಿ ಜ. 18 – ಸುಪ್ರೀಂ ಕೋರ್ಟ್‌ನ ಹಾಲಿ ಹಿರಿಯ ನ್ಯಾಯಮೂರ್ತಿಯೊಬ್ಬರ ಸಂಬಂಧಿಕರು ಆಂಧ್ರ ಪ್ರದೇಶದ ಅಮರಾವತಿ ಜಮೀನು ಹಗರಣದಲ್ಲಿ ಬೇನಾಮಿ ವಹಿವಾಟಿನಲ್ಲಿ ಭಾಗಿಯಾಗಿದ್ದಾರೆ ಎಂದು ಆಂಧ್ರ ಪ್ರದೇಶ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಈಶ್ವರಯ್ಯ ಆರೋಪಿಸಿದ್ದು, ಈ ಬಗ್ಗೆ ಸಾಕ್ಷಿ ಸಂಗ್ರಹಿಸುವ ಪ್ರಯತ್ನದಲ್ಲಿರುವುದಾಗಿ ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣ ಪತ್ರ ಸಲ್ಲಿಸಿರುವ ಅವರು, ಬೇನಾಮಿ ವಹಿವಾಟಿನ ಬಗ್ಗೆ ಅಮಾನತ್ತುಗೊಂಡಿರುವ ನ್ಯಾಯಿಕ ಅಧಿಕಾರಿಯೊಬ್ಬರಿಂದ ಮಾಹಿತಿ ಕೇಳಿರುವುದಾಗಿ ತಿಳಿಸಿದ್ದಾರೆ.


ತಮ್ಮ ಹಾಗೂ ಅಮಾನತ್ತುಗೊಂಡಿರುವ ನ್ಯಾಯಿಕ ಅಧಿಕಾರಿ ನಡುವಿನ ದೂರವಾಣಿ ಸಂಭಾಷಣೆಯ ತನಿಖೆಗೆ ಆಂಧ್ರ ಪ್ರದೇಶ ಹೈಕೋರ್ಟ್ ಕಳೆದ ವರ್ಷ ಆಗಸ್ಟ್ 13ರಂದು ಆದೇಶ ಹೊರಡಿಸಿತ್ತು. ಈ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿರುವ ನಿವೃತ್ತ ನ್ಯಾಯಮೂರ್ತಿ, ನ್ಯಾಯಾಂಗದ ವಿರುದ್ಧ ಗಂಭೀರ ಸಂಚು ನಡೆಯುತ್ತಿರುವುದು ಸಂಭಾಷಣೆಯಲ್ಲಿದೆ ಎಂದಿದ್ದಾರೆ.

ನ್ಯಾಯಿಕ ಅಧಿಕಾರಿಯ ಜೊತೆಗಿನ ಸಂಭಾಷಣೆಯ ಕುರಿತು ಸ್ಪಷ್ಟನೆ ನೀಡುವಂತೆ ನಿವೃತ್ತ ನ್ಯಾಯಮೂರ್ತಿ ಈಶ್ವರಯ್ಯಗೆ ಕೇಳಲಾಗಿತ್ತು. ಈ ಹಿನ್ನೆಲೆಯಲ್ಲಿ ಈಶ್ವರಯ್ಯ ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೇಂಟ್ ಜಾನ್ಸ್ ಸ್ಕೂಲ್, ಐ.ಟಿ.ಐ. ಕಾಲೇಜು, ರಿಂಗ್ ರಸ್ತೆ, ಶ್ರೀನಿವಾಸ ನಗರ, ತರಳಬಾಳು ಬಡಾವಣೆ ಮತ್ತು ಸುತ್ತ ಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಇರುವುದಿಲ್ಲ.

## ಶಶಿಕಲಾ ನೇಮಕ



ದಾವಣಗೆರೆ, ಜ.18- ಆನ್‌ಲೈನ್ ಕರ್ನಾಟಕ ಮಹಿಳಾ ಸಮಿತಿಯ ಅಧ್ಯಕ್ಷರಾಗಿ ಎ. ಶಶಿಕಲಾ ಅವರು ನೇಮಕಗೊಂಡಿದ್ದಾರೆ. ವೃದ್ಧಾಶ್ರಮ, ಅನಾಥಾಶ್ರಮ, ಯಾವುದೇ ಸಮಸ್ಯೆಗಳಿಗೆ ಮೊ. 98452 79197 ರಲ್ಲಿ ಸಂಪರ್ಕಿಸುವಂತೆ ಟಿ. ನಾರಾಯಣರಾವ್ ತಿಳಿಸಿದ್ದಾರೆ.

# ಇನ್ನೊಮ್ಮೆ ಮುಷ್ಕರ ನಡೆಸಿದರೆ ಸಾರಿಗೆ ಸಂಸ್ಥೆ ಕಳೆದುಕೊಳ್ಳುತ್ತೀರಿ : ಚಂದ್ರಪ್ಪ

**ಪ್ರತಿಭಟನೆ ನಡೆಸಿದ್ದಕ್ಕಿಂತ ಕಲ್ಲು ತೂರಿದ್ದಕ್ಕೆ ಬೇಸರವಾಯಿತು : ಸವದಿ**

ದಾವಣಗೆರೆ, ಜ. 18 - ಯಾರದೋ ಮಾತು ಕೇಳಿ ಇನ್ನೊಮ್ಮೆ ಮುಷ್ಕರ ನಡೆಸಿದರೆ ನೀವು ಸಾರಿಗೆ ಸಂಸ್ಥೆಯನ್ನು ಕಳೆದುಕೊಳ್ಳುತ್ತೀರಿ ಎಂದು ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಎಂ. ಚಂದ್ರಪ್ಪ ನೌಕರರಿಗೆ ನೇರ ಎಚ್ಚರಿಕೆ ನೀಡಿದ್ದಾರೆ.

ಬಸ್ ನಿಲ್ದಾಣ ಪುನರ್ ನಿರ್ಮಾಣ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಿದ್ದ ಅವರು, ಕೊರೊನಾ ಕಾಲದಲ್ಲಿ ಸಾಕಷ್ಟು ಸಂಕಷ್ಟ ಎದುರಾಗಿತ್ತು. ಆ ಸಂದರ್ಭದಲ್ಲಿ ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರು ನೌಕರರ ಕುಟುಂಬದವರು ಉಪವಾಸ ಬೀಳಬಾರದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಳಿ ಕೇಳಿ 1,780 ಕೋಟಿ ರೂ. ಪಡೆದುಕೊಂಡು ವೇತನ ನೀಡಿದರು. ಸಾರಿಗೆ ನೌಕರರು ಅವರ ಫೋಟೋ ಇಟ್ಟುಕೊಂಡು ಪೂಜೆ ಮಾಡಬೇಕಿತ್ತು ಎಂದರು. ಆದರೆ, ನೌಕರರು ಯಾರದೋ ಮಾತು ಕೇಳಿ ನಾಲ್ಕು ದಿನ ಮುಷ್ಕರ ಮಾಡಿ ಸಾರಿಗೆ ಸಂಸ್ಥೆ ಹಾಗೂ ಸಾರ್ವಜನಿಕರಿಗೆ ಸಂಕಷ್ಟ ತಂದಿರಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಾರಿಗೆ ನಿಗಮ 30 ಸಾವಿರ ಬಸ್ ಹೊಂದಿದೆ. ಆದರೆ, ಈಗ ಕೇವಲ 20 ಸಾವಿರ ಬಸ್‌ಗಳನ್ನು ಓಡಿಸಲಾಗುತ್ತಿದೆ. ಹತ್ತು ಸಾವಿರ ಬಸ್‌ಗಳು ಗ್ಯಾರೇಜ್‌ನಲ್ಲಿವೆ. ಕಳೆದ 11 ತಿಂಗಳಿನಿಂದ ಡೀಸೆಲ್‌ಗೆ ಆಗುವಷ್ಟೂ ಆದಾಯ ಬರುತ್ತಿಲ್ಲ ಎಂದವರು ನಿಗಮದ ಸಂಕಷ್ಟವನ್ನು ವಿವರಿಸಿದರು.

ನೀವೆಲ್ಲರೂ ಸಂಸ್ಥೆಯ ನೌಕರರು. ಇದು ನಿಮಗೆ ಅನುಕೂಲ ನೀಡುವ ಸಂಸ್ಥೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದವರು ಹೇಳಿದರು.

ನಂತರ ಮಾತನಾಡಿದ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ನೌಕರರು ಪ್ರತಿಭಟಿಸುವ ಹಕ್ಕು ಹೊಂದಿದ್ದಾರೆ. ಆದರೆ, ಸಮಯ - ಸಂದರ್ಭ ಅರಿಯಬೇಕು ಎಂದು ಹೇಳಿದರು.

ಪ್ರತಿಭಟನೆ ನಡೆಸಿದರೂ ಬೇಸರವಾಗಲಿಲ್ಲ. ಆದರೆ, ಚಾಲಕರು ಹಾಗೂ ನಿರ್ವಾಹಕರು ನಿಮ್ಮ ಬದುಕಿಗೆ ಬೆಳಕಾಗುವ ಸಾರಿಗೆ ವಾಹನಗಳಿಗೆ ಕಲ್ಲು ತೂರಿದ್ದು ಬೇಸರ ತರಿಸಿತು. ನಿಮ್ಮ ಬದುಕಿಗೆ ನೀವೇ ಕಲ್ಲು ಹಾಕುವ ಹುಚ್ಚು ಸಾಹಸಕ್ಕೆ ಕೈ ಹಾಕಬೇಡಿ ಎಂದು ಹೇಳಿದರು.

# ಕುರುಬರ ಎಸ್ಟಿ ಹೋರಾಟದ ಪಾದಯಾತ್ರೆ



**ನಗರಕ್ಕೆ ಇಂದು**

ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದಿಂದ ಪಾದಯಾತ್ರೆ ಪ್ರಾರಂಭವಾಗಲಿದ್ದು, ಸಂಜೆ 4 ಗಂಟೆಗೆ ದಾವಣಗೆರೆಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದವರೆಗೆ ಮೆರವಣಿಗೆ ಆಯೋಜಿಸಲಾಗಿದೆ.

ಸಂಜೆ 6.30ಕ್ಕೆ ಬೀರಲಿಂಗೇಶ್ವರ ದೇವಾಲಯದ ಆವರಣದಲ್ಲಿ ಜಾಗೃತಿ ಸಮಾವೇಶ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಜಗದ್ಗುರು ಶ್ರೀ ನಿರಂಜನಾನಂದ ಮಹಾಸ್ವಾಮೀಜಿ, ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ, ಕೆ.ಎಸ್. ಈಶ್ವರಪ್ಪ, ಹೆಚ್.ಎಂ. ರೇವಣ್ಣ, ವಿರೂಪಾಕ್ಷಪ್ಪ, ಬಿ.ಎಂ. ಸತೀಶ್, ರಾಜು ಮೌರ್ಯ, ಹಾಲೇಕಲ್ ವೀರಣ್ಣ, ಶಿವಮೂರ್ತಿ, ಶಿವಣ್ಣ ಮಾಸ್ಟರ್, ಸಿದ್ದಲಿಂಗಪ್ಪ, ಸಲ್ಲಳ್ಳಿ ಹನುಮಂತಪ್ಪ, ದೀಟೂರು ಚಂದ್ರು ಮತ್ತಿತರರು ಭಾಗವಹಿಸಲಿದ್ದಾರೆ ಎಂದು ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ತಿಳಿಸಿದ್ದಾರೆ.

# ವಿದೇಶರು ಕಣ್ಣಾರೆ ಕಂಡದ್ದನ್ನು ಅತ್ಯುತ್ತಮವಾಗಿ ದಾಖಲಿಸಿದ್ದಾರೆ



ಪ್ರೊ. ಕೆ.ಆರ್. ಸಿದ್ದಪ್ಪ

ದಾವಣಗೆರೆ. ಜ .17 - ನಮ್ಮ ಕನ್ನಡ ನಾಡು ಕಟ್ಟುವಲ್ಲಿ ನೂರಾರು ರಾಜ ಮನೆತನಗಳು ಶ್ರಮಿಸಿ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ ಶಿಲ್ಪಕಲೆಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಸಾಂಸ್ಕೃತಿಕ ಚಟುವಟಿಕೆ ಮೂಲಕ ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ವಿಜಯನಗರ ಸಾಮ್ರಾಜ್ಯ ಪ್ರಮುಖವಾದುದು. ಅವರ ಕಾಲದಲ್ಲಿ ಪ್ರಜೆಗಳು ಸುಖ, ಸಮೃದ್ಧಿಯಿಂದ ಇದ್ದರು. ರಾಜರು ಪ್ರಜೆಗಳ ಹಿತ ಕಾಪಾಡುತ್ತಿದ್ದರು. ಅಂತಹ ಸಾಮ್ರಾಜ್ಯವನ್ನು ಬಹುಮನಿ ಸುಲ್ತಾನರೆಲ್ಲರೂ ಒಗ್ಗೂಡಿ ಈ ವೈಭವದ ವಿಜಯನಗರ ಸಾಮ್ರಾಜ್ಯದ ಮೇಲೆ ದಾಳಿ ಮಾಡಿ ಕೊಳ್ಳೆ ಹೊಡೆದು ನಾಶ ಮಾಡಿದ್ದಾರೆ ಎಂದು ವಿಶ್ರಾಂತ ಇತಿಹಾಸ ಪ್ರಾಧ್ಯಾಪಕ ಪ್ರೊ. ಕೆ. ಆರ್. ಸಿದ್ದಪ್ಪನವರು ತಿಳಿಸಿದರು.

ವಿಜಯನಗರಕಾಲದ ವೈಭವವನ್ನು ನಮ್ಮ ದೇಶೀ ಇತಿಹಾಸಕಾರರಿಗಿಂತ ವಿದೇಶಿ ಪ್ರವಾಸಿಗರು ಕಣ್ಣಾರೆ ಕಂಡದ್ದನ್ನು ಅತ್ಯುತ್ತಮವಾಗಿ ದಾಖಲಿಸಿದ್ದಾರೆ. ರಾಬರ್ಟ ಸೆವೆನ್ ಎಂಬ ಆಂಗ್ಲ ಅಧಿಕಾರಿ ಸಾಂಸ್ಕೃತಿಕ ವೈಭವದ ಚಾರಿತ್ರಿಕ ಹಿನ್ನೆಲೆಯನ್ನು ದೇಶ - ವಿದೇಶಗಳಲ್ಲಿ ಹುಡುಕಿ 'ಮರೆಯಲಾರದ ವಿಜಯನಗರ ಸಾಮ್ರಾಜ್ಯ' ಎಂಬ ಇತಿಹಾಸ ಪುಸ್ತಕ ಬರೆದಿದ್ದಾರೆ.

ದಾವಣಗೆರೆಯ ಗ್ರಂಥ ಸರಸ್ವತಿ ಪ್ರತಿಭಾ ರಂಗವು ಕನ್ನಡಕಬ್ಬ ಉಗಾದಿಹಬ್ಬ ಕಾರ್ಯಕ್ರಮದಡಿ ನಡೆಸಿದ ಚಿಂತನಾ ಗೋಷ್ಠಿಯಲ್ಲಿ 'ವಿದೇಶಿಗರು ಕಂಡ ವಿಜಯನಗರ ಸಾಮ್ರಾಜ್ಯ' ವಿಷಯ ಕುರಿತು ಪ್ರೊ.ಕೆ. ಆರ್. ಸಿದ್ದಪ್ಪ ಅವರು ಮಾತನಾಡಿದರು. ಮುಂದುವರೆದು ಮಾತನಾಡಿದ ಅವರು ವಿದೇಶಿ ಪ್ರವಾಸಿಗರಾದ ಪೋರ್ಚುಗಲ್ ದೇಶದ ಪೇಸ್, ಪರ್ಸಿಯಾದ ಅಬ್ದುಲ್ ರಜಾಕ್ ಇಟಲಿಯ ನಿಕೋಲಿಯೊಕೋಂಟೆ ಹಾಗೂ ಲೋಡೋವಿಕೊ ಒಟ್ಟೆರಮ ಎಂಬ ವಿದೇಶಿ ಪ್ರವಾಸಿಗರು ಬರೆದ ದಾಖಲೆಗಳನ್ನು ಸಂಗ್ರಹಿಸಿ ರಾಬರ್ಟ ಸೆವೆನ್ ತನ್ನ ಈ ಪುಸ್ತಕದಲ್ಲಿ ಬರೆದಿಟ್ಟಿದ್ದಾನೆ. ನಮಗೆ ಇತಿಹಾಸ ಪ್ರಜ್ಞೆ ಇಲ್ಲ. ಇತಿಹಾಸದಲ್ಲಿ ನಡೆದ ವಿಶಿಷ್ಟ ಘಟನೆಗಳನ್ನು ನಾವು ದಾಖಲಿಸುವಲ್ಲಿ ಇನ್ನೂ ಸಾಕಷ್ಟು ಸುಧಾರಿಸಬೇಕಿದೆ ಎಂದರು.

ರಾಜ್ಯ ವಾರ್ತಾ ಇಲಾಖೆಯ ವಿಶ್ರಾಂತ ನಿರ್ದೇಶಕ ಮರಡಿ ಕರಿಯಪ್ಪ ಮಾತನಾಡಿ, ಗ್ರಂಥ ಸರಸ್ವತಿ ಪ್ರತಿಭಾ ರಂಗದ ಈ ವಿಶಿಷ್ಟ ಕನ್ನಡಕಬ್ಬ ಉಗಾದಿಹಬ್ಬ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಈ ನಾಡಿನ ದಾಖಲಾರ್ಹ ಅತ್ಯಂತ ಸೋಜಿಗದ ವಿಷಯವಾಗಿದೆ. ಎಲ್ಲರೂ ಕುರ್ಕಿ ಕುಟುಂಬದವರನ್ನು ಪ್ರೋತ್ಸಾಹಿಸೋಣ ಎಂದು ಆಶಿಸಿದರು.

ಗಾನಗಂಧರ್ವ ಸಂಗೀತ ಕಲಾತಂಡದ ಸಂಗೀತ ಶಿಕ್ಷಕಿ ಶ್ರೀಮತಿ ಮಂಗಳಗೌರಿ ಅವರೊಂದಿಗೆ ಶಿಷ್ಯಂದಿರಾದ ಶೀಲಾ, ವೀಣಾ, ಸವಿತಾ ಸುಗಮ ಸಂಗೀತ ಕಾರ್ಯಕ್ರಮ ನಡೆಸಿ ಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರ್. ಶಿವಕುಮಾರಸ್ವಾಮಿ ಕುರ್ಕಿ ವಹಿಸಿದ್ದರು.

ದಾವಣಗೆರೆ ನಗರ ಪ್ರಾಥಮಿಕ ಕೃಷಿ ಪತ್ತಿನ ಸಂಘ ನಿ.,
ದಾವಣಗೆರೆ ನಗರ, ದಾವಣಗೆರೆ ತಾಲ್ಲೂಕು.
ಆಟೋಮೊಬೈಲ್ಸ್ ಸೊಸೈಟಿ ಬಿಲ್ಡಿಂಗ್, ಪಿ.ಬಿ. ರಸ್ತೆ, ದಾವಣಗೆರೆ.
ಇ-ಸ್ಟಾಂಪಿಂಗ್ ದೊರೆಯುತ್ತವೆ
ನಮ್ಮ ಸಂಘದಲ್ಲಿ 'ಇ-ಸ್ಟಾಂಪಿಂಗ್' ವಿತರಣೆ ಕಾರ್ಯವನ್ನು ಆರಂಭಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ವಿನಂತಿ.
ಕೆ.ಬಿ. ನಾಗರಾಜ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ssims SPARSH
CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ವಿಕೃತಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ
ದಿನಾಂಕ: ಗುರುವಾರ, 21 ಜನವರಿ 2021 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರ ವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

## ಕದಳಿ ಮಹಿಳಾ ವೇದಿಕೆಯಿಂದ ಜಯಶೀಲಾ ಹೆಚ್ಚೆನ್ನೆಸ್ ಅವರಿಗೆ ಸನ್ಮಾನ




ದಾವಣಗೆರೆ, ಜ.18- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಂಗ ಸಂಸ್ಥೆಯಾದ ಕದಳಿ ಮಹಿಳಾ ವೇದಿಕೆಯ 12ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ವೇದಿಕೆಯ ಗೌರವಾಧ್ಯಕ್ಷರಾದ ಶ್ರೀಮತಿ ಜಯಶೀಲಾ ಹೆಚ್. ಎನ್. ಷಡಾಕ್ಷರಪ್ಪ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯ ಪದಾಧಿಕಾರಿಗಳಿಗೆ ಸೂಕ್ತ ಸಲಹೆ - ಮಾರ್ಗದರ್ಶನ ಮಾಡುವುದರ ಜೊತೆಗೆ, ವೇದಿಕೆಯ ಎಲ್ಲಾ ಕಾರ್ಯಕ್ರಮಗಳಿಗೆ ನೀಡುತ್ತಿದ್ದ ಪ್ರೋತ್ಸಾಹವನ್ನು ಮೆಲುಕು ಹಾಕುವುದರೊಂದಿಗೆ ಜಯಶೀಲಾ ಅವರನ್ನು ಶಾಲು ಹೊದಿಸಿ, ಸನ್ಮಾನಿಸಿ ಗೌರವಿಸಲಾಯಿತು. ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪಲ್ಲವಿ ಪಾಟೀಲ್, ಶ್ರೀಮತಿ ಸುಧಾ ದಿಬ್ದಳ್ಳಿ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಇಂದು ಕಾಂಗ್ರೆಸ್ ಎಸ್ಸಿ ಘಟಕದ ಸಭೆ

ಜಿಲ್ಲಾ ಕಾಂಗ್ರೆಸ್ ಕಮಿಟಿ ಪ.ಜಾ. ಇಲಾಖೆಯಿಂದ ನಗರದ ಬಾಪೂಜಿ ಅತಿಥಿ ಗೃಹದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಸಭೆ ನಡೆಯಲಿದೆ.

ಸಾರ್ವಜನಿಕ ಸಮಸ್ಯೆಗಳ ಕುರಿತಂತೆ ಚರ್ಚಿಸಿ ಪ್ರತಿಭಟನೆ ನಡೆಸುವ ಸಂಬಂಧ ಈ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಪಕ್ಷದ ಕಮಿಟಿ ಪ.ಜಾ. ಇಲಾಖೆ ವಿಭಾಗದ ಬಿ.ಹೆಚ್. ವೀರಭದ್ರಪ್ಪ ತಿಳಿಸಿದ್ದಾರೆ.

## ಗುಜರಾತ್ ಸೋಮನಾಥ ದೇವಾಲಯ ಟ್ರಸ್ಟ್ ಅಧ್ಯಕ್ಷರಾಗಿ ಮೋದಿ



ಅಹಮದಾಬಾದ್, ಜ. 18 – ಗುಜರಾತ್‌ನ ಪ್ರಭಾಸ್ ಪಟನ್ ನಗರದಲ್ಲಿರುವ ವಿಶ್ವ ಪ್ರಸಿದ್ಧ ಶ್ರೀ ಸೋಮವಾಥ ದೇವಾಲಯದ ಟ್ರಸ್ಟ್‌ನ ನೂತನ ಅಧ್ಯಕ್ಷರನ್ನಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ನೇಮಿಸಲಾಗಿದೆ.

ಮೋದಿ ಅವರು ಶ್ರೀ ಸೋಮನಾಥ ಟ್ರಸ್ಟ್‌ನ ಟ್ರಸ್ಟಿಗಳಲ್ಲಿ ಒಬ್ಬರಾಗಿದ್ದರು. ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ದೇವಾಲಯದ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಹಿಂದೆ ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಅವರು ಟ್ರಸ್ಟ್‌ನ ಅಧ್ಯಕ್ಷರಾಗಿದ್ದರು. ಪ್ರಧಾನ ಮಂತ್ರಿಯೊಬ್ಬರು ಟ್ರಸ್ಟ್ ಅಧ್ಯಕ್ಷರಾಗಿರುವುದು ಎರಡನೇ ಬಾರಿ. ಈ ಹಿಂದೆ ಟ್ರಸ್ಟ್ ಅಧ್ಯಕ್ಷರಾಗಿದ್ದ ಗುಜರಾತ್ ಮಾಜಿ ಮುಖ್ಯಮಂತ್ರಿ ಕೇಶುಭಾಯಿ ಪಟೇಲ್ ನಿಧನದ ನಂತರ ಅಧ್ಯಕ್ಷ ಸ್ಥಾನ ಖಾಲಿ ಉಳಿದಿತ್ತು.


### ವಿದೇಶ ಪ್ರಯಾಣ-ಶುಭಾಶಯಗಳು



ದಿನಾಂಕ 19.01.2021ರಂದು
ಎಂ.ಎಸ್. ವಿದ್ಯಾಭ್ಯಾಸಕ್ಕಾಗಿ
ಅಮೆರಿಕ ದೇಶದ Stevens University,
ನ್ಯೂಜೆರ್ಸಿಗೆ ತೆರಳುತ್ತಿರುವ
**ಕುಮಾರಿ ಅನನ್ಯ ರಾಜೇಂದ್ರ**
ಅವರಿಗೆ ಹಾರ್ದಿಕ ಶುಭಾಶಯಗಳು.
ಇವರ ಪ್ರಯಾಣ ಸುಖಕರವಾಗಿರಲಿ
ಮತ್ತು ಇವರ ವಿದ್ಯಾಭ್ಯಾಸವು ಉನ್ನತ
ಮಟ್ಟಕ್ಕೇರಲಿ ಎಂದು ಶುಭ ಹಾರೈಸುವ...


- ಶ್ರೀ ಸಿ. ಸಣ್ಣಪ್ಪ ಮತ್ತು ಶ್ರೀಮತಿ ತಿಪ್ಪಮ್ಮನವರು
- ಶ್ರೀ ಪಿ.ಕೆ. ರಾಜೇಂದ್ರ ಮತ್ತು ಶ್ರೀಮತಿ ಗೌರಿ ರಾಜೇಂದ್ರ, ಹೆದ್ನೆ.
- ಡಾ॥ ಐಶ್ವರ್ಯ ರಾಜೇಂದ್ರ, MS (OBG)
- ಸಮರ್ಥ್ ರಾಜೇಂದ್ರ, (BE, CS) PES, ಬೆಂಗಳೂರು.
- ಎಸ್.ಜಿ. ರುದ್ರೇಶ್ ಮತ್ತು ಶ್ರೀಮತಿ ಪುಷ್ಪಲತಾ ರುದ್ರೇಶ್ ಹಾಗೂ ಸ್ನೇಹಿತರು ಮತ್ತು ಬಂಧು-ಮಿತ್ರರು.



ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ
**ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ - 577 004.

### 76ನೇ ಹುಟ್ಟುಹಬ್ಬದ ಶುಭಾಶಯಗಳು



ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟಿನ ಅಧ್ಯಕ್ಷರಾದ
ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು
**ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು**
ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ
ಮ್ಯಾನೇಜಿಂಗ್ ಟ್ರಸ್ಟಿಗಳಾದ
**ಶ್ರೀ ಅಥಣಿ ವೀರಣ್ಣ**
ಅವರಿಗೆ 76ನೇ ಹುಟ್ಟುಹಬ್ಬದ ಪ್ರಯುಕ್ತ
ಶುಭಾಶೀರ್ವಾದಗಳೊಂದಿಗೆ
ಆಶೀರ್ವದಿಸಿರುತ್ತಾರೆ.

ಶುಭಾಶಯ ಕೋರುವವರು :

ಶ್ರೀ ಕೆ.ಎಂ. ಹೊಳಿಯಪ್ಪ, ಉಪಾಧ್ಯಕ್ಷರು  ಶ್ರೀ ಎನ್.ಎ. ಮುರುಗೇಶ್, ಕಾರ್ಯದರ್ಶಿ

ಟ್ರಸ್ಟಿಗಳು

| | |
|---|---|
| ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಮಂತ್ರಿಗಳು, ಕರ್ನಾಟಕ ಸರ್ಕಾರ. | ಶ್ರೀ ಬಿ.ಸಿ. ಉಮಾಪತಿ |
| ಶ್ರೀ ಎಂ.ಹೆಚ್. ನಿಜಾನಂದ | ಶ್ರೀ ಐ.ಪಿ. ಏಕೋರಾಮಾರಾಧ್ಯ |
| ಶ್ರೀ ಆರ್. ರಮಾನಂದ | ಶ್ರೀ ಆರ್. ವೆಂಕಟರೆಡ್ಡಿ |
| ಶ್ರೀ ಎಂ. ಮಹೇಶ್ಚಂದ್ರಬಾಬು | ಶ್ರೀ ಬಿ.ಸಿ. ಶಿವಕುಮಾರ್ |
| ಶ್ರೀ ಕೆ.ಜಿ. ಸುಗಂಧರಾಜ್ | ಶ್ರೀ ಎ.ಕೆ. ಪ್ರಶಾಂತ್ |
| ಶ್ರೀ ಎಸ್.ಕೆ. ವೀರಣ್ಣ | ಶ್ರೀ ಎ.ವಿ. ಪ್ರಸಾದ್ |
| | ಶ್ರೀ ಎಂ.ವಿ. ವೀರೇಂದ್ರ |

**ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)ನ ಆಶ್ರಯದಲ್ಲಿ ನಡೆಯುವ ಎಲ್ಲಾ ಶಾಲಾ-ಕಾಲೇಜುಗಳ ಪ್ರಾಂಶುಪಾಲರು, ಅಧ್ಯಾಪಕರ ವೃಂದ, ಸಿಬ್ಬಂದಿ ವೃಂದ ಹಾಗೂ ವಿದ್ಯಾರ್ಥಿಗಳು.**


## ನಗರಕ್ಕೆ ಇಂದು ಕೆ.ಹೆಚ್.ಮುನಿಯಪ್ಪ, ಬಿ.ಎನ್.ಚಂದ್ರಪ್ಪ





ಮಾಜಿ ಕೇಂದ್ರ ಸಚಿವ ಕೆ.ಹೆಚ್. ಮುನಿಯಪ್ಪ ಮತ್ತು ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ಅವರುಗಳು ಇಂದು ನಗರಕ್ಕೆ ಆಗಮಿಸಲಿದ್ದಾರೆ.

ಬೆಂಗಳೂರಿನಲ್ಲಿ ಕೆಪಿಸಿಸಿಯಿಂದ ನಾಳೆ ಹಮ್ಮಿಕೊಂಡಿರುವ ರಾಜಭವನ ಚಲೋ ಕುರಿತು ಜಿಲ್ಲೆಯ ಹಾಲಿ-ಮಾಜಿ ಸಚಿವರು, ಶಾಸಕರು, ಬ್ಲಾಕ್ ಅಧ್ಯಕ್ಷರುಗಳ ಜೊತೆ ಇಂದು ಬೆಳಿಗ್ಗೆ 11 ಗಂಟೆಗೆ ಬಾಪೂಜಿ ಅತಿಥಿ ಗೃಹದಲ್ಲಿ ಮಾತುಕತೆ ನಡೆಸುವರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್. ಬಿ.ಮಂಜಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ದಿನೇಶ್.ಕೆ.ಶೆಟ್ಟಿ ತಿಳಿಸಿದ್ದಾರೆ.


### ಹೃತ್ಪೂರ್ವಕ ಅಭಿನಂದನೆಗಳು



ಶ್ರೀ ಹೆಚ್. ವೀರನಗೌಡ್ರು, ಅಧ್ಯಕ್ಷರು, ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ, ಮಲೇಬೆನ್ನೂರು
ಇಂದೂಧರ ಎನ್. ರುದ್ರಗೌಡ, ನಿರ್ದೇಶಕರು, ಜಿಗಳಿ.
ಬಿ.ಹೆಚ್. ರವಿ, ನಿರ್ದೇಶಕರು, ಕೊಕ್ಕನೂರು.
ಸಂತೋಷ್ ಪಾಳೇದ, ನಿರ್ದೇಶಕರು, ಜಿ.ಬೇವಿನಹಳ್ಳಿ.
ಭಾಗ್ಯ ಉದಯಗೌಡ, ನಿರ್ದೇಶಕರು, ಹಿಂಡಸಘಟ್ಟ.
ಎ. ಆರೀಫ್ ಅಲಿ, ನಿರ್ದೇಶಕರು, ಮಲೇಬೆನ್ನೂರು.
ಶ್ರೀಮತಿ ಬಿ.ವಿ. ಶೋಭಾ ಪಾಲಾಕ್ಷಪ್ಪ, ಉಪಾಧ್ಯಕ್ಷರು, ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ, ಮಲೇಬೆನ್ನೂರು
ಆರ್. ನಾಗರಾಜ, ನಿರ್ದೇಶಕರು, ಕೊಕ್ಕನೂರು.
ಟಿ. ರಾಮಚಂದ್ರಪ್ಪ, ನಿರ್ದೇಶಕರು, ಕೊಕ್ಕನೂರು.
ಹೆಚ್.ಟಿ. ಶಾಂತನಗೌಡ, ನಿರ್ದೇಶಕರು, ಹಳ್ಳಿಹಾಳ್.
ಗೌಡ್ರ ಬಸವರಾಜಪ್ಪ, ನಿರ್ದೇಶಕರು, ಜಿಗಳಿ.
ಹೆಚ್.ಟಿ. ಪರಮೇಶ್ವರಪ್ಪ, ನಿರ್ದೇಶಕರು, ಹಳ್ಳಿಹಾಳ್.
ಕೆ.ಹೆಚ್. ಆಂಜನೇಯ, ನಿರ್ದೇಶಕರು, ಕೊಕ್ಕನೂರು.
ಎಂ.ವಿ. ನಾಗರಾಜ್, ನಿರ್ದೇಶಕರು, ಜಿಗಳಿ
ಎ.ಕೆ. ತಿಪ್ಪೇಶಪ್ಪ, ನಿರ್ದೇಶಕರು, ಹಳ್ಳಿಹಾಳ್.

ದಿನಾಂಕ : 15.01.2021ರಂದು ನಡೆದ ಮಲೇಬೆನ್ನೂರಿನ ಪ್ರತಿಷ್ಠಿತ ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ ಇದರ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹಳ್ಳಿಹಾಳ್ ಗ್ರಾಮದ ಶ್ರೀ ಹೆಚ್. ವೀರನಗೌಡ ಹಾಗೂ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಜಿ. ಬೇವಿನಹಳ್ಳಿ ಗ್ರಾಮದ ಶ್ರೀಮತಿ ಶೋಭಾ ಬಿ.ಜಿ. ಪಾಲಾಕ್ಷಪ್ಪ ಇವರಿಗೆ ಹಾಗೂ ದಿ.:3.1.2021ರಂದು ನಡೆದ ನಿರ್ದೇಶಕರುಗಳ ಚುನಾವಣೆಯಲ್ಲಿ ಆಯ್ಕೆಯಾದ ಎಲ್ಲಾ ನಿರ್ದೇಶಕರುಗಳಿಗೂ ನಮ್ಮೆಲ್ಲರ ಹೃದಯಪೂರ್ವಕ ಅಭಿನಂದನೆಗಳು.

ಸರ್ವ ಷೇರುದಾರರು ಹಾಗೂ ಸಿಬ್ಬಂದಿ ವರ್ಗ,
**ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ,** ನಂದಿಗುಡಿ ರಸ್ತೆ, ಮಲೇಬೆನ್ನೂರು.



॥ ಶ್ರೀ ಮುರುಡ ಬಸವೇಶ್ವರ ಪ್ರಸನ್ನ ॥

### ಮತ್ತೆ ಹುಟ್ಟಿ ಬಾ... "ಮಂಜು"



ದಾವಣಗೆರೆ ಸಿಟಿ ವಿದ್ಯಾನಗರ ವಾಸಿ
ಶ್ರೀಮತಿ ಜಿ.ಬಿ. ವಿಶಾಲ ದಿ. ಜಿ. ಬಸವರಾಜು ಮತ್ತು ಮಕ್ಕಳು, ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 15.01.2021ನೇ ಶುಕ್ರವಾರ ಬೆಳಗಿನ ಜಾವ 6.30ಕ್ಕೆ
ನನ್ನ ಮಗ ಜಿ.ಬಿ. ನಟೇಶ್ ಇವರ ಧರ್ಮಪತ್ನಿ
**ಶ್ರೀಮತಿ ಮಂಜುಳಾರವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 19.01.2021ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್‌ನ ಶ್ರೀ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳವರ ಮಠದಲ್ಲಿ ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಪತಿ : ನಟೇಶ್, ಮಕ್ಕಳಾದ : ಚಿ. ಸುಜನ್, ಚಿ. ಸುಮನ್, ಅತ್ತೆ : ವಿಶಾಲ
ತಂದೆ : ಬಸವರಾಜಪ್ಪ, ತಾಯಿ : ಸುವರ್ಣಮ್ಮ, ತಂಗಿ : ಹೇಮಲತಾ, ವಿನೋದ್ ಹಾಗೂ ಚಿ. ಶ್ರೇಷ್ಠಾ
**ಮೆ॥ ಜಗದೀಶ್ ಏಜೆನ್ಸೀಸ್ (ಲುಬ್ರಿಕೆಂಟ್ಸ್ ಡೀಲರ್ಸ್)**
ಮತ್ತು ಸಿಬ್ಬಂದಿ ವರ್ಗ ಪಿ.ಬಿ. ರಸ್ತೆ, ದಾವಣಗೆರೆ. ಫೋ. : 99648 29220, 99646 75175

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.






ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ
ಮಾನ್ಯ ಹಾಲಿ ಶಾಸಕರೂ, ಮಾಜಿ ಸಚಿವರಾದ
**ಶ್ರೀ ಎಸ್.ಎ. ರವೀಂದ್ರನಾಥ್** ಇವರ
ಶಿಫಾರಸ್ಸಿನ ಮೇರೆಗೆ
ಲೋಕೋಪಯೋಗಿ ಇಲಾಖೆಯಿಂದ
ಮಂಜೂರಾಗಿರುವ ಕಾಮಗಾರಿಗಳ

### ಗುದ್ದಲಿ ಪೂಜೆ ಕಾರ್ಯಕ್ರಮ

ದಿನಾಂಕ 19.01.2021ನೇ ಮಂಗಳವಾರ

**ಕಾಮಗಾರಿಗಳ ವಿವರ :**

1) ದಾವಣಗೆರೆ ತಾಲ್ಲೂಕು ಬಿ. ಕಲ್ಪನಹಳ್ಳಿ ಗ್ರಾಮದ ಎಸ್.ಸಿ. ಕಾಲೋನಿಯ ಮುಖ್ಯರಸ್ತೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ.
ಅಂದಾಜು ಮೊತ್ತ : ರೂ. 52 ಲಕ್ಷಗಳು
ಸ್ಥಳ : ಬಿ. ಕಲ್ಪನಹಳ್ಳಿ, ಸಮಯ : ಬೆಳಿಗ್ಗೆ 11 ಗಂಟೆಗೆ

2) ದಾವಣಗೆರೆ ತಾಲ್ಲೂಕು ಬೇತೂರು ಗ್ರಾಮದ ಎಸ್.ಸಿ. ಕಾಲೋನಿಯಿಂದ ಬೇತೂರು ಹಳ್ಳದವರೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ.
ಅಂದಾಜು ಮೊತ್ತ : ರೂ. 52 ಲಕ್ಷಗಳು
ಸ್ಥಳ : ಮುಖ್ಯರಸ್ತೆ, ಬೇತೂರು
ಸಮಯ : ಬೆಳಿಗ್ಗೆ 11.30 ಗಂಟೆಗೆ

3) ದಾವಣಗೆರೆ ತಾಲ್ಲೂಕು ಮಲ್ಪೆ - ಮೊಳಕಾಲ್ಮೂರು ರಸ್ತೆಯಿಂದ ನಾಗರಕಟ್ಟೆ ಎಸ್.ಸಿ. ಕಾಲೋನಿಯವರೆಗೆ ಕೂಡುವ ಕೂಡು ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.
ಅಂದಾಜು ಮೊತ್ತ : ರೂ. 35 ಲಕ್ಷಗಳು
ಸ್ಥಳ : ನಾಗರಕಟ್ಟೆ, ಸಮಯ : ಮಧ್ಯಾಹ್ನ 12.00 ಗಂಟೆಗೆ

4) ದಾವಣಗೆರೆ ತಾಲ್ಲೂಕು ಕಾಡಜ್ಜಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.
ಅಂದಾಜು ಮೊತ್ತ : ರೂ. 20 ಲಕ್ಷಗಳು
ಸ್ಥಳ : ಕಾಡಜ್ಜಿ, ಸಮಯ : ಮಧ್ಯಾಹ್ನ 12.30 ಗಂಟೆಗೆ

ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಈ ಭಾಗದ ಎಲ್ಲಾ ಜನಪ್ರತಿನಿಧಿಗಳಿಗೂ, ಗ್ರಾಮಸ್ಥರುಗಳಿಗೂ, ಅಭಿಮಾನಿಗಳಿಗೂ, ಅಧಿಕಾರಿಗಳಿಗೂ, ಸರ್ವರಿಗೂ
**ಹೃತ್ಪೂರ್ವಕ ಸುಸ್ವಾಗತ**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte